# ಅಧ್ಯಾಯ 4 – ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

ಹಣಕಾಸಿನ ನಿಯಮಗಳು ಮತ್ತು ನಿಖರವಾದ ಲೆಕ್ಕಗಳ ಅನುಸರಣೆಯ ಆಧಾರದ ಮೇಲೆ ಉತ್ತಮ ಆಂತರಿಕ ಹಣಕಾಸು ವರದಿ ವ್ಯವಸ್ಥೆಯು ಉತ್ತಮ ಆಡಳಿತದ ಗುಣಲಕ್ಷಣಗಳಲ್ಲಿ ಒಂದಾಗಿದೆ. ಈ ಅಧ್ಯಾಯವು ಪ್ರಸಕ್ತ ವರ್ಷದಲ್ಲಿ ವಿವಿಧ ಹಣಕಾಸು ನಿಯಮಗಳು, ಕಾರ್ಯ ವಿಧಾನಗಳು ಮತ್ತು ನಿರ್ದೇಶನಗಳ ಅನುಸರಣೆಯ ಅವಲೋಕನ ಮತ್ತು ಸ್ಥಿತಿಯನ್ನು ಒದಗಿಸುತ್ತದೆ.

## ಎ ಖಾತೆಗಳ ಸಂಪೂರ್ಣತೆಗೆ ಸಂಬಂಧಿಸಿದ ಅವಲೋಕನಗಳು

### 4.1 ರಾಜ್ಯ ಸಂಚಿತ ನಿಧಿ ಅಥವಾ ಸಾರ್ವಜನಿಕ ಲೆಕ್ಕದ ಹೊರಗಿನ ನಿಧಿಗಳು

- **ಖಾಸಗಿ ಬ್ಯಾಂಕ್‌ನಲ್ಲಿ ನಿಧಿಯನ್ನು ಇರಿಸಿರುವುದು**

ಕರ್ನಾಟಕದಲ್ಲಿ ಸರ್ಕಾರದ ಹಣಕಾಸು ವ್ಯವಹಾರಗಳನ್ನು ಸರ್ಕಾರದ ಪರವಾಗಿ ಹಣವನ್ನು ಸ್ವೀಕರಿಸುವ ಮತ್ತು ವಿತರಿಸುವ ಖಜಾನೆಗಳ ಮೂಲಕ ನಿರ್ವಹಿಸಲಾಗುತ್ತದೆ. ಆದರೂ, ವಿಶೇಷ ಸಂದರ್ಭಗಳಲ್ಲಿ ಬ್ಯಾಂಕ್‌ಗಳ ಮೂಲಕ ಹಣವನ್ನು ನಿರ್ವಹಿಸಲು ಸರ್ಕಾರಿ ಇಲಾಖೆಗಳಿಗೆ ಅನುಮತಿ ಇದೆ. ಕರ್ನಾಟಕ ಸರ್ಕಾರವು ನಿಧಿಗಳ ನಿರ್ವಹಣೆಗೆ ಮಾರ್ಗಸೂಚಿಗಳನ್ನು (ಜನವರಿ 2017) ಬಿಡುಗಡೆಮಾಡಿದ್ದು, ಇದು ಹೆಚ್ಚುವರಿ ಹಣವನ್ನು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಮಾತ್ರ ಠೇವಣಿ ಇಡಬೇಕು ಎಂದು ಷರತ್ತು ವಿಧಿಸಿದೆ. ಆದಾಗ್ಯೂ, ಸಂಸ್ಥೆಯು ತನ್ನ ಕಾರ್ಯಾಚರಣೆಯ ಅನುಕೂಲಕ್ಕಾಗಿ ನಿರ್ದಿಷ್ಟ ಬ್ಯಾಂಕಿಂಗ್ ಪರಿಹಾರದ ಅಗತ್ಯವಿರುವಾಗ ಮತ್ತು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಅಂತಹ ಸೇವೆಗಳನ್ನು ಒದಗಿಸಲು ಸಾಧ್ಯವಾಗದಿದ್ದಾಗ, ಸಂಸ್ಥೆಯು ಖಾತೆಯನ್ನು ತೆರೆಯಲು ಅನುಸೂಚಿತ ಬ್ಯಾಂಕ್ ಅನ್ನು ಪರಿಗಣಿಸಬಹುದಾಗಿದ್ದು ಅಂತಹ ಬ್ಯಾಂಕು ಸಂಸ್ಥೆಗೆ ಮೌಲ್ಯಯುತ ಬ್ಯಾಂಕಿಂಗ್ ಹಾಗೂ ವ್ಯವಹಾರ ನಿವಾರಣೋಪಾಯಗಳನ್ನು ಒದಗಿಸುವಂತಿರಬೇಕು. ಅಂತಹ ಎಲ್ಲಾ ಸಂದರ್ಭಗಳಲ್ಲಿ ಹಣಕಾಸು ಇಲಾಖೆಯ ಸಮ್ಮತಿಯೊಂದಿಗೆ ಆಡಳಿತ ಇಲಾಖೆಯಿಂದ ಅನುಮೋದನೆಯ ಅಗತ್ಯವಿದೆ.

ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಸ್ವಚ್ಛ ಭಾರತ್ ಮಿಷನ್ ಯೋಜನೆಯ ಅನುಷ್ಠಾನಕ್ಕೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ಸ್ವೀಕೃತವಾದ ಮೊತ್ತವನ್ನು ಒಂದು ಖಾಸಗಿ ಬ್ಯಾಂಕ್ ಅಂದರೆ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್, ರಿಚ್ಮಂಡ್ ಟೌನ್, ಶಾಖೆಯ ಖಾತೆಯಲ್ಲಿ ಇರಿಸಿ ವ್ಯವಹಾರವನ್ನು ನಿರ್ವಹಿಸುತ್ತಿದೆ. ಈ ಖಾತೆಯಲ್ಲಿ ವೆಚ್ಚವಾಗದೆ ಉಳಿದ ಡದ ₹544.62 ಕೋಟಿಗಳಲ್ಲಿ ₹489.00 ಕೋಟಿಗಳನ್ನು ಐಸಿಐಸಿಐ ಬ್ಯಾಕಿನ ಫ್ಲೆಕ್ಸಿ ಠೇವಣಿಗೆ ವರ್ಗಾಯಿಸಲು ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಇದನ್ನು ನಗರಾಭಿವೃದ್ಧಿ ಇಲಾಖೆಯು (ಅಕ್ಟೋಬರ್ 2018) ತಿರಸ್ಕರಿಸಿ, ಆರ್ಥಿಕ ಇಲಾಖೆಯ ಜನವರಿ 2017ರ ಸುತ್ತೋಲೆಯಲ್ಲಿ ನಿಗದಿಸಿರುವ ವಿಧಾನವನ್ನು ಅನುಸರಿಸಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಧಿಯನ್ನು ಇಡಲು ನಿರ್ದೇಶಿಸಿತು. ಆದರೆ, ಪೌರಾಡಳಿತ ನಿರ್ದೇಶನಾಲಯವು ಸರ್ಕಾರದ ನಿರ್ದೇಶನಗಳನ್ನು ಕಡೆಗಣಿಸಿ ಶೇಕಡ 7.15ರ ಬಡ್ಡಿಯೊಂದಿಗೆ ₹489.00 ಕೋಟಿಗಳನ್ನು ಐಸಿಐಸಿಐ ಬ್ಯಾಂಕ್‌ಗೆ ವರ್ಗಾಯಿಸಿದ್ದು, ಇದು ಅಕ್ರಮವಾಗಿತ್ತು.

ಇದಕ್ಕೆ ಉತ್ತರವಾಗಿ ಪೌರಾಡಳಿತ ನಿರ್ದೇಶನಾಲಯವು ಆರ್ಥಿಕ ಇಲಾಖೆಯ ಸೂಚನೆಯಂತೆ (ನವೆಂಬರ್ 2020) ಖಾತೆಯನ್ನು ತೆರೆಯಲಾಗಿದೆ ಎಂದು ಹೇಳಿದೆ. ಆದರೆ, ಪೌರಾಡಳಿತ

ನಿರ್ದೇಶನಾಲಯವು ಪರಿಶೋದನೆಗೆ ಅನುಮೋದನೆಯ ಪ್ರತಿಯನ್ನು ಒದಗಿಸಿಲ್ಲ ಅಥವಾ ರಾಜ್ಯ ಸರ್ಕಾರದ ಸೂಚನೆಗಳ ಪ್ರಕಾರ ಖಾತೆಯನ್ನು ಮುಕ್ತಾಯಗೊಳಿಸಲು ಕ್ರಮವನ್ನು ಪ್ರಾರಂಭಿಸಿಲ್ಲ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಡಿಸೆಂಬರ್ 2021) ನಗರಾಭಿವೃದ್ಧಿ ಇಲಾಖೆಯು ಬ್ಯಾಂಕಿನಿಂದ (ಐಸಿಐಸಿಐ) ವೆಚ್ಚ ಮಾಡದ ಹಣವನ್ನು ಹಿಂಪಡೆಯಲು ಮುಂದಿನ ಕ್ರಮ ಕೈಗೊಳ್ಳಲು ಕೋರಲಾಗುವುದು ಎಂದು ಹೇಳಿದೆ.

- **ಸರ್ಕಾರದ ಅನುದಾನದಿಂದ ಗಳಿಸಿದ ಬಡ್ಡಿಯನ್ನು ಜಮೆ ಮಾಡದಿರುವುದು**

ಸರ್ಕಾರವು ಕಂಪನಿಗಳು, ನಿಗಮಗಳು, ಸ್ವಾಯತ್ತಸಂಸ್ಥೆಗಳು ಸೇರಿದಂತೆ ಶಾಸನಬದ್ಧ ಮಂಡಳಿಗಳು ಮತ್ತು ಪ್ರಾದೇಶಿಕ ಸೊಸೈಟಿಗಳಿಗೆ ಸಂಬಂಧಿಸಿದ ಸಂಸ್ಥೆಯ ಸಂದಾಯಿತ ಷೇರು ಬಂಡವಾಳ ರೂಪದಲ್ಲಿ, ಅನುದಾನಗಳು, ಸಬ್ಸಿಡಿಗಳು, ವೆಚ್ಚಗಳ ಮರುಪಾವತಿ, ಸಾಲಗಳು ಮತ್ತುಯೋಜನೆಗಳಿಗೆ ಬಿಡುಗಡೆಯಾದ ಹಣ ಇತ್ಯಾದಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತದೆ.

ಆರ್ಥಿಕ ಇಲಾಖೆಯು ಸರ್ಕಾರದ ಆದೇಶದ (ಜುಲೈ 2003) ಮೂಲಕ ಎಲ್ಲಾ ನಿಗಮ/ಕಂಪನಿಗಳು/ ಸ್ವಾಯತ್ತ ಸಂಸ್ಥೆಗಳು ಇತ್ಯಾದಿಗಳಿಗೆ, ಅವುಗಳು ಪಡೆದ ಸರ್ಕಾರಿ ನಿಧಿಗಳ ಮೇಲೆ ಗಳಿಸಿದ ಬಡ್ಡಿಯನ್ನು '0049 ಬಡ್ಡಿ ಸ್ವೀಕೃತಿಗಳು' ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವುದರ ಮೂಲಕ ಸರ್ಕಾರಿ ಖಾತೆಗೆ ಪಾವತಿಸಲು ನಿರ್ದೇಶಿಸಿದೆ. ಹಾಗೆ ಗಳಿಸಿದ ಬಡ್ಡಿಯನ್ನು ಸಂಸ್ಥೆಗಳು ಯಾವುದೇ ಇತರ ವೆಚ್ಚಕ್ಕೆ ಬಳಸಲು ಅವಕಾಶವಿರುವುದಿಲ್ಲ ಎಂದೂ ಅದು ಒತ್ತಿ ಹೇಳಿದೆ. ಇದನ್ನು ಆಗಸ್ಟ್ 2019ರ ಸುತ್ತೋಲೆಯಲ್ಲಿ ಪುನರುಚ್ಚರಿಸಲಾಗಿದೆ.

ಕರ್ನಾಟಕ ಉರ್ದು ಅಕಾಡೆಮಿ, ಬೆಂಗಳೂರು ಮೇಲಿನ ಸೂಚನೆಗಳಿಗೆ ವಿರುದ್ಧವಾಗಿ ಸರ್ಕಾರದ ಅನುದಾನದಿಂದ ಗಳಿಸಿದ ₹31.85 ಲಕ್ಷ ಬಡ್ಡಿಯನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿಲ್ಲ ಎಂದು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. 2018–19ರಿಂದ 2020–21ರ ಅವಧಿಯಲ್ಲಿ ಗಳಿಸಿದ ಬಡ್ಡಿ ಮತ್ತು ಅದರ ವ್ಯವಹೃತಿಯ ವಿವರಗಳನ್ನು **ಕೋಷ್ಟಕ 4.1** ರಲ್ಲಿ ಸೂಚಿಸಲಾಗಿದೆ:

**ಕೋಷ್ಟಕ–4.1: ಸಂಸ್ಥೆಯು ಗಳಿಸಿದ ಬಡ್ಡಿ ಮತ್ತು ಅದರ ವ್ಯವಹೃತಿಯ ವಿವರಗಳು**

**(₹ ಲಕ್ಷಗಳಲ್ಲಿ)**

| ಸಂಸ್ಥೆಯ ಹೆಸರು | ಬಡ್ಡಿ ಗಳಿಕೆ | | | | ಬಡ್ಡಿ ಹಣದ ವ್ಯವಹೃತಿ |
|---|---|---|---|---|---|
| | 2018–19 | 2019–20 | 2020–21 | ಒಟ್ಟು | |
| ಕರ್ನಾಟಕ ಉರ್ದು ಅಕಾಡೆಮಿ, ಬೆಂಗಳೂರು | 14.56 | 9.37 | 7.92 | **31.85** | 2018–19 ರಿಂದ 2020–21 ರ ಅವಧಿಯಲ್ಲಿ ಗಳಿಸಿದ ಬಡ್ಡಿಯನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿಲ್ಲ ಮತ್ತು ಆ ವರ್ಷಗಳಲ್ಲಿ ಕಡಿಮೆ ಆಯವ್ಯಯ ಮಂಜೂರು ಆಗಿರುವುದರಿಂದ ಇದನ್ನು ಬಳಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ |

ರಾಜ್ಯದ ತೆರಿಗೆಯೇತರ ಆದಾಯವನ್ನು ಹೆಚ್ಚಿಸಲು ಸಹಾಯವಾಗುವುದರಿಂದ, ಸರ್ಕಾರವು ಅನುದಾನಗಳ ಮೇಲೆಗಳಿಸಿದ ಬಡ್ಡಿಯನ್ನು ಜಮೆ ಮಾಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ಕರ್ನಾಟಕ ಉರ್ದು ಅಕಾಡೆಮಿಗೆ ಬಡ್ಡಿಯನ್ನು ಸರ್ಕಾರಕ್ಕೆ ಪಾವತಿಸಲು ಆಡಳಿತ ಇಲಾಖೆಯ ಮೂಲಕ ವಿನಂತಿಸಲಾಗುವುದು ಎಂದು ಹೇಳಿದೆ (ಡಿಸೆಂಬರ್ 2021).

## ಬಿ. ಪಾರದರ್ಶಕತೆಗೆ ಸಂಬಂಧಿಸಿದ ಅವಲೋಕನ

### 4.2 ಬಳಕೆಯ ಪ್ರಮಾಣ ಪತ್ರಗಳ ಸಲ್ಲಿಕೆಯಲ್ಲಿ ವಿಳಂಬ

ಕರ್ನಾಟಕ ಆರ್ಥಿಕ ಸಂಹಿತೆ 1958ರ ನಿಯಮ 161(5)ರ ಅನ್ವಯ ನಿರ್ದಿಷ್ಟ ಉದ್ದೇಶಗಳಿಗಾಗಿ ಒದಗಿಸಿದ ಅನುದಾನಗಳಿಗೆ ಸಂಬಂಧಿಸಿದಂತೆ ಅನುದಾನಿತರಿಂದ, ಮಂಜೂರಾತಿ ದಿನಾಂಕದಿಂದ 18 ತಿಂಗಳೊಳಗೆ ನಿರ್ದಿಷ್ಟಪಡಿಸದ ಹೊರತು, ಇಲಾಖಾ ಅಧಿಕಾರಿಗಳು ಬಳಕೆ ಪ್ರಮಾಣ ಪತ್ರಗಳನ್ನು ಪಡೆಯಬೇಕು ಮತ್ತು ಪರಿಶೀಲನೆಯ ನಂತರ ಅವುಗಳನ್ನು ಮಹಾಲೇಖಾಪಾಲರ (ಲೇ ಮತ್ತು ಹ) ಅವರಿಗೆ ರವಾನಿಸಬೇಕು. **ಕೋಷ್ಟಕ-4.2**ರಲ್ಲಿ ವಿವರಿಸಿದಂತೆ 2020-21 ನೇ ವರ್ಷಕ್ಕೆ ₹38.63 ಕೋಟಿಗಳ ಮೊತ್ತದ 37 ಬಳಕೆ ಪ್ರಮಾಣ ಪತ್ರಗಳು ಸಲ್ಲಿಕೆಯಾಗದೆ ಬಾಕಿ ಉಳಿದಿವೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ. ಬಾಕಿ ಉಳಿದಿರುವ ಬಳಕೆ ಪ್ರಮಾಣ ಪತ್ರಗಳ ವರ್ಷವಾರು ಸ್ಥಿತಿಯನ್ನು **ಕೋಷ್ಟಕ-4.3**ರಲ್ಲಿ ನೀಡಲಾಗಿದೆ.

**ಕೋಷ್ಟಕ-4.2: 2020-21ಕ್ಕೆ ಬಾಕಿ ಇರುವ ಬಳಕೆ ಪ್ರಮಾಣಪತ್ರಗಳು**

**(₹ ಕೋಟಿಗಳಲ್ಲಿ)**

| ವರ್ಷ | ಪ್ರಾರಂಭಿಕ ಶಿಲ್ಕು | | ಸೇರ್ಪಡೆ | | ತೀರುವಳಿ | | ಸಲ್ಲಿಕೆಗೆ ಬಾಕಿ | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 2019-20 | 110 | 764.81 | 79 | 737.13 | 138 | 1,319.45 | 51 | 182.49 |
| 2020-21 | 51 | 182.49 | 396 | 1,239.80 | 410 | 1,383.66 | 37 | 38.63 |

*ಆಕರ – ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ*

**ಕೋಷ್ಟಕ-4.3: ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ವರ್ಷವಾರು ವಿವರ**

**(₹ ಕೋಟಿಗಳಲ್ಲಿ)**

| ವರ್ಷ | ಬಳಕೆ ಪ್ರಮಾಣಪತ್ರಗಳ ಸಂಖ್ಯೆ | ಮೊತ್ತ |
|---|---|---|
| 2002-03 | 3 | 1.41 |
| 2007-08 | 1 | 0.24 |
| 2010-11 | 1 | 0.11 |
| 2015-16 | 2 | 1.85 |
| 2016-17 | 2 | 0.59 |
| 2018-19 | 16 | 26.52 |
| 2019-20 | 12 | 7.91 |
| **Total** | **37** | **38.63** |


*ಆಕರ – ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ*

ಇದಲ್ಲದೆ, ನಿಯಮ 161(5) ಅನ್ವಯ ನಿಗದಿತ ಬಳಕೆ ಪ್ರಮಾಣ ಪತ್ರದ ನಮೂನೆಯು ವರ್ಷದಲ್ಲಿ ಬಳಕೆಯಾಗದ ಅನುದಾನವನ್ನು ಅಧ್ಯರ್ಪಣೆ ಮಾಡಬೇಕು ಅಥವ ನಂತರದ ವರ್ಷದಲ್ಲಿ ಪಡೆಯ ಬೇಕಾದ ಅನುದಾನಕ್ಕೆ ಸರಿ ಹೊಂದಿಸಬೇಕು ಎಂದು ಸ್ಪಷ್ಟವಾಗಿ ಸೂಚಿಸುತ್ತದೆ. 2019-20ನೇ ಸಾಲಿನಲ್ಲಿ ₹182.49 ಕೋಟಿಗಳ ಮೊತ್ತದ 51 ಬಳಕೆ ಪ್ರಮಾಣ ಪತ್ರಗಳು ಬಾಕಿ ಇದ್ದು 2020-21 ರಲ್ಲಿ ₹38.63 ಕೊಟಿಗಳ ಮೊತ್ತದ 37 ಬಳಕೆ ಪ್ರಮಾಣ ಪತ್ರಗಳಿಗೆ ಇಳಿಕೆಯಾಗಿದ್ದು, 2019-20ಕ್ಕೆ ಹೋಲಿಸಿದರೆ, 2020-21ಕ್ಕೆ ಬಾಕಿ ಉಳಿದಿರುವ ಬಳಕೆ ಪ್ರಮಾಣ ಪತ್ರಗಳ ಮೊತ್ತವು ಶೇಕಡಾ 79ರಷ್ಟು ಕಡಿಮೆಯಾಗಿದೆ. ಆದರೂ ಮೇಲಿನ 37 ಪ್ರಕರಣಗಳಲ್ಲಿ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದ ಕಾರಣ, ಬಿಡುಗಡೆಯಾದ ಅನುದಾನದ ಸಂಪೂರ್ಣ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆಯು ಬಾಕಿ ಉಳಿದಿರುವ ಹೊರತಾಗಿಯೂ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಇದು ಅನುದಾನ ಮಂಜೂರಾತಿಯಲ್ಲಿರುವ ನಿಯಂತ್ರಣದ ಕೊರತೆಯನ್ನು ಸೂಚಿಸುತ್ತದೆ. ಆದ್ದರಿಂದ, ಮುಂದಿನ ಅನುದಾನವನ್ನು ಬಿಡುಗಡೆ ಮಾಡುವ ಮೊದಲು ಸರ್ಕಾರವು

ಒಂದು ವರ್ಷಕ್ಕೂ ಹೆಚ್ಚು ಕಾಲ ಬಾಕಿ ಇರುವ ಎಲ್ಲಾ ಬಳಕೆ ಪ್ರಮಾಣ ಪತ್ರದ ಬಾಬ್ತುಗಳನ್ನು ಪರಿಶೀಲಿಸುವ ಅಗತ್ಯವಿದೆ.

**ನಕ್ಷೆ 4.1 2019–20ರವರೆಗು ನೀಡಿರುವ ಅನುದಾನಗಳಿಗೆ ಬಳಕೆ ಪ್ರಮಾಣ ಪತ್ರ ಬಾಕಿ ಇರುವ 4 ಪ್ರಮುಖ ಇಲಾಖೆಗಳು**

**(₹ ಕೋಟಿಗಳಲ್ಲಿ)**




*ಆಕರ – ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ*

**ನಕ್ಷೆ 4.1**ರಲ್ಲಿ ನೋಡಿದಂತೆ, ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವ ಹೆಚ್ಚಿನ ಪ್ರಕರಣಗಳು ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆ (ಶೇಕಡ 63.42) ಮತ್ತು ಕ್ರೀಡೆ ಮತ್ತು ಯುವಜನ ಸೇವೆಗಳು (ಶೇಕಡ 32.02) ಇಲಾಖೆಗೆ ಸಂಬಂಧಿಸಿದೆ. ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಲ್ಲಿ ಬಾಕಿ ಉಳಿದಿರುವುದು ಸಂಕಲ್ಪಿಸಿದ ಉದ್ದೇಶಗಳಿಗಾಗಿ ಬಿಡುಗಡೆಯಾದ ಅನುದಾನದ ಬಳಕೆಯ ಬಗ್ಗೆ ಭರವಸೆ ಇಲ್ಲದಿರುವುದರ ಜೊತೆಗೆ ಇಲಾಖೆಗಳಿಂದ ಅನುದಾನಿತರಿಗೆ ಬಿಡುಗಡೆಯಾದ ಅನುದಾನದ ಬಳಕೆಯ ಮೇಲ್ವಿಚಾರಣೆಯ ಕೊರತೆಯನ್ನು ಸೂಚಿಸುತ್ತದೆ. ಬಾಕಿ ಉಳಿದಿರುವ ಬಳಕೆ ಪ್ರಮಾಣ ಪತ್ರಗಳ ಪ್ರಧಾನ ಲೆಕ್ಕ ಶೀರ್ಷಿಕೆವಾರು ಮತ್ತು ಇಲಾಖಾವಾರು ವಿವರಗಳನ್ನು ಪ್ರತಿವರ್ಷಕ್ಕೆ ಪ್ರತ್ಯೇಕವಾಗಿ **ಅನುಬಂಧ 4.1**ರಲ್ಲಿ ನೀಡಲಾಗಿದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಈ ಅವಲೋಕನಗಳನ್ನು ಅನುಸರಿಸಲು ಆಡಳಿತ ಇಲಾಖೆಗಳಿಗೆ ವಿನಂತಿಸಲಾಗುವುದು ಎಂದು ಉತ್ತರಿಸಿದೆ.

## 4.3 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಸಾದಿಲ್ವಾರು ವೆಚ್ಚಗಳ ಕೈಪಿಡಿ, 1958ರ ನಿಯಮ 36ರ ಅಡಿಯಲ್ಲಿ, ನಿಯಂತ್ರಣ ಮತ್ತು ವಿತರಣಾ ಅಧಿಕಾರಿಗಳು ಸೇವಾ ಶೀರ್ಷಿಕೆಗಳಿಗೆ ಖರ್ಚು ಹಾಕಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣವನ್ನು ಪಡೆಯಲು ಅಧಿಕಾರ ಹೊಂದಿದ್ದಾರೆ ಮತ್ತು ಈ ಬಿಲ್ಲುಗಳಿಗೆ ಪಾವತಿಗಲ್ಲದ ಸವಿವರ ಸಾದಿಲ್ವಾರು (ಎನ್‌ಡಿಸಿ) ಬಿಲ್ಲುಗಳನ್ನು (ಅಂತಿಮ ವೆಚ್ಚವನ್ನು ಬೆಂಬಲಿಸುವ ವೋಚರ್‌ಗಳು) ಬಿಲ್‌ಗೆ ಸಂಬಂಧಿಸಿದ ತಿಂಗಳ ನಂತರದ ತಿಂಗಳ 15ರ ಮೊದಲು ಖಜಾನೆಗಳ ಮೂಲಕ ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಗೆ ಪ್ರಸ್ತುತ ಪಡಿಸುವ ಅಗತ್ಯವಿದೆ. ನಿಯಂತ್ರಣ ಅಧಿಕಾರಿಗಳು ತಕ್ಷಣದ ವಿತರಣೆಗೆ ಅಗತ್ಯವಿಲ್ಲದ ಹೊರತು ಬಿಲ್‌ಗಳ ಮೂಲಕ ಖಜಾನೆಯಿಂದ ಯಾವುದೇ ಮೊತ್ತವನ್ನು ಪಡೆದಿಲ್ಲವೆಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಮಾರ್ಚ್ 2021ರ ಅಂತ್ಯಕ್ಕೆ 2,221 ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಮೇಲೆ ಪಡೆದ ಒಟ್ಟು ₹126.34 ಕೋಟಿಗಳಿಗೆ ಸವಿವರ ಸಾದಿಲ್ವಾರು ಬಿಲ್‌ಗಳು ಸಲ್ಲಿಕೆಯಾಗದೆ **ಕೋಷ್ಟಕ–4.4**ರಲ್ಲಿ ವಿವರಿಸಿದಂತೆ ಬಾಕಿ ಉಳಿದಿವೆ.

**ಕೋಷ್ಟಕ–4.4: ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳಿಗೆ ಸವಿವರ ಬಿಲ್‌ಗಳ ಸಲ್ಲಿಕೆಯ ವರ್ಷವಾರು ಪ್ರಗತಿ**

**(₹ ಕೋಟಿಗಳಲ್ಲಿ)**


| ವರ್ಷ | ಪ್ರಾರಂಭಿಕ ಶಿಲ್ಕು | | ಸೇರ್ಪಡೆ | | ತೀರುವಳಿ | | ಅಂತಿಮ ಶಿಲ್ಕು | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 2017–18 ವರೆಗೆ | 3,272 | 84.81 | 3,094 | 90.03 | 3,090 | 90.84 | 3,276 | 84.00 |
| 2018–19 | 3,276 | 84.00 | 2,286 | 188.64 | 3,467 | 179.37 | 2,095 | 93.27 |
| 2019–20 | 2,095 | 93.27 | 2,109 | 182.90 | 2,245 | 179.49 | 1,959 | 96.68 |
| 2020–21 | 1,959 | 96.68 | 2,247 | 153.46 | 1,985 | 123.80 | 2,221 | 126.34 |

*ಆಕರ–ಹಣಕಾಸು ಲೆಕ್ಕಗಳು*

** ಮಾರ್ಚ್ 2021ರ ಬಿಲ್ಲುಗಳನ್ನು ಹೊರತುಪಡಿಸಿ*

**ನಕ್ಷೆ–4.2: ಸವಿವರ ಸಾದಿಲ್ವಾರು ಬಿಲ್‌ಗಳು ಸಲ್ಲಿಕೆಯಾಗದೆ ಉಳಿದಿರುವ ಪ್ರಮುಖ ಇಲಾಖೆಗಳು**

**(₹ ಕೋಟಿಗಳಲ್ಲಿ)**




*ಆಕರ : ಮಹಾಲೇಖಾಪಾಲರು(ಲೆ ಮತ್ತು ಹ) ಅವರ ಕಛೇರಿ*

ಬಾಕಿ ಉಳಿದಿರುವ ಸವಿವರ ಸಾದಿಲ್ವಾರು ಬಿಲ್‌ಗಳಲ್ಲಿ ಶೇಕಡ 30ರಷ್ಟು ಇತರೆ ಗ್ರಾಮೀಣಾಭಿವೃದ್ಧಿ ಇಲಾಖೆ – ಪ್ರಧಾನ ಶೀರ್ಷಿಕೆ 2515 (₹38.02 ಕೋಟಿಗಳು), ಶೇಕಡ 29ರಷ್ಟು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಚುನಾವಣೆಗಳು) – ಪ್ರಧಾನ ಶೀರ್ಷಿಕೆ 2015 (₹36.92 ಕೋಟಿಗಳು), ಶೇಕಡ 25ರಷ್ಟು ಗೃಹ ಇಲಾಖೆ (ಪೋಲಿಸ್) ಪ್ರಧಾನ ಶೀರ್ಷಿಕೆ – 2055 (₹31.56 ಕೋಟಿ) ಗಳಿಗೆ ಸಂಬಂಧಿಸಿದೆ ಎಂದು **ನಕ್ಷೆ–4.2** ತೋರಿಸುತ್ತದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಪಡೆದ ಹಣವನ್ನು ಸಂಚಿತ ನಿಧಿಯ ಪ್ರಧಾನ ಶೀರ್ಷಿಕೆಯಡಿ ಲೆಕ್ಕ ಹಾಕಲಾಗುತ್ತದೆ. ನಿಗದಿಪಡಿಸಿದ ಸಮಯದೊಳಗೆ ಲೆಕ್ಕಗಳನ್ನು ಇತ್ಯರ್ಥಪಡಿಸದಿದ್ದರೆ ವೆಚ್ಚವು ಉಬ್ಬಿಕೊಳ್ಳುತ್ತದೆ. ಮಾರ್ಚ್ 2019ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ ವರದಿಯ **ಕಂಡಿಕೆ 3.6**ರಲ್ಲಿನ ಲೆಕ್ಕಪರಿಶೋಧನಾ ಟೀಕೆಗೆ ಉತ್ತರವಾಗಿ, ಆರ್ಥಿಕ ಇಲಾಖೆಯು (ಆಗಸ್ಟ್ 2021) ಬಾಕಿ ಉಳಿದಿರುವ ಎನ್‌ಡಿಸಿ ಬಿಲ್‌ಗಳ ಇತ್ಯರ್ಥಕ್ಕಾಗಿ ಎಲ್ಲಾ ಸಂಬಂಧಿತ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ (ಫೆಬ್ರವರಿ 2021) ಮತ್ತು 25 ಅಕ್ಟೋಬರ್ 2019ರ ಸುತ್ತೋಲೆಯ ಪ್ರಕಾರ ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳಿಗೆ ಸವಿವರ ಸಾದಿಲ್ವಾರು ಬಿಲ್‌ಗಳನ್ನು ಸಲ್ಲಿಸಲು ವಿಫಲವಾದ ಬಟವಾಡೆ ಅಧಿಕಾರಿಗಳ ಸಂಬಳದ ಮತ್ತು ಸಂಬಳೇತರ ಬಿಲ್‌ಗಳನ್ನು ಖಜಾನೆ–2ರಲ್ಲಿ ತಡೆಹಿಡಿಯಲು ಖಜಾನೆಗಳಿಗೆ ಸೂಚಿಸಲಾಗಿದೆ ಎಂದು ಹೇಳಿದೆ. ಆದಾಗ್ಯೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಬಾಕಿ ಇರುವ ಬಿಲ್‌ಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಮೇಲೆ ಸೆಳೆದ ಮೊತ್ತಗಳಿಗೆ ಸಮರ್ಥನೀಯವಾಗಿ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್‌ಗಳನ್ನು ಸಾದಿಲ್ವಾರು ವೆಚ್ಚ ಕೈಪಿಡಿಯಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಸಲ್ಲಿಸಬೇಕು.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಈ ಅವಲೋಕನಗಳ ಅನುಪಾಲನೆಗೆ ಆಡಳಿತ ಇಲಾಖೆಗಳಿಗೆ ವಿನಂತಿಸಲಾಗುವುದು ಎಂದು ಉತ್ತರಿಸಿದೆ.

## 4.4 ವೈಯಕ್ತಿಕ ಠೇವಣಿ ಲೆಕ್ಕಗಳು

ಕರ್ನಾಟಕ ಆರ್ಥಿಕ ಸಂಹಿತೆ 1958ರ 286ನೇ ನಿಯಮವು, ಹಣಕಾಸು ವ್ಯವಹಾರಗಳಿಗೆ ಸಾಮಾನ್ಯ ಲೆಕ್ಕಪತ್ರ ವ್ಯವಸ್ಥೆಯು ಸೂಕ್ತವಲ್ಲದ ಸಂದರ್ಭಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ (ಪಿಡಿ) ಖಾತೆಗಳನ್ನು ತೆರೆಯಲು ಅವಕಾಶವನ್ನು ಒದಗಿಸುತ್ತದೆ. ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕುವ ಮೂಲಕ ರಚಿಸಲಾದ ಪಿಡಿ ಖಾತೆಗಳನ್ನು ಆರ್ಥಿಕ ವರ್ಷದ ಕೊನೆಯಲ್ಲಿ ಮುಕ್ತಾಯಗೊಳಿಸಬೇಕು. ಆದಾಗ್ಯೂ, ಕೆಳಗಿನ ಪ್ಯಾರಾಗಳಲ್ಲಿ ಚರ್ಚಿಸಿರುವಂತೆ ನಂತರದ ವರ್ಷಕ್ಕೆ ಗಮನಾರ್ಹ ಶಿಲ್ಕುಗಳನ್ನು ಮುಂದುವರಿಸಿದ್ದು ಸಂಹಿತೆಯ ನಿಯಮಗಳನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಅನುಸರಿಸಿರುವುದಿಲ್ಲ. ಪಿಡಿ ಖಾತೆಗಳ ಆಡಳಿತಾಧಿಕಾರಿಗಳು ಸಂಚಿತ ನಿಧಿಗೆ ವರ್ಗಾಯಿಸಬೇಕಾದ ಶಿಲ್ಕಿನ ಬಗ್ಗೆ ಖಜಾನೆ ಅಧಿಕಾರಿಗೆ ತಿಳಿಸಬೇಕು. ತಮ್ಮ ಪಿಡಿ ಖಾತೆಗಳನ್ನು ನಿಗದಿತ ಅವಧಿಯನ್ನು ಮೀರಿ ಮುಂದುವರಿಸಲು ಆಡಳಿತಾಧಿಕಾರಿಗಳು ಹಣಕಾಸು ಇಲಾಖೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ. ಖಜಾನೆಯ ಲೆಕ್ಕಗಳೊಂದಿಗೆ ತಮ್ಮ ವೈಯಕ್ತಿಕ ಠೇವಣಿ ಖಾತೆಗಳ ಲೆಕ್ಕಗಳನ್ನು ನಿಯತಕಾಲಿಕವಾಗಿ ಹೊಂದಾಣಿಕೆ ಮಾಡುವುದು ಸಂಬಂಧಪಟ್ಟ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿದೆ.

### *4.4.1 ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳ ಪ್ರವೃತ್ತಿಗಳು*

ಕಳೆದ ಐದು ವರ್ಷಗಳಲ್ಲಿ ಅಂದರೆ 2016-17ರಿಂದ 2020-21ರ ಅವಧಿಯಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳನ್ನು **ಕೋಷ್ಟಕ-4.5**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 4.5: ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಇರಿಸಲಾದ ನಿಧಿಗಳು**

**(₹ ಕೋಟಿಗಳಲ್ಲಿ)**

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು/ಠೇವಣಿಗಳು | ಹಿಂಪಡೆತಗಳು | ಅಂತಿಮ ಶಿಲ್ಕು |
|---|---|---|---|---|
| **2016-17** | 2,735.61 | 5,516.51 | 5,310.01 | 2,942.12 |
| **2017-18** | 2,942.12 | 4,191.46 | 4,395.06 | 2,741.52 |
| **2018-19** | 2,741.52 | 5,350.98 | 4,007.36 | 4,085.14 |
| **2019-20** | 4,085.14 | 6,557.67 | 6,221.25 | 4,421.56 |
| **2020-21** | 4,421.56 | 4,711.16 | 5,143.49 | 3,989.23 |

*ಆಕರ: ಹಣಕಾಸು ಲೆಕ್ಕಗಳು*

2019-20ರಲ್ಲಿ ಅಸ್ತಿತ್ವದಲ್ಲಿದ್ದ 76 ವೈಯಕ್ತಿಕ ಠೇವಣಿ ಖಾತೆಗಳಲ್ಲಿ 2020-21ರಲ್ಲಿ ₹2.79 ಕೋಟಿಗಳ ಶಿಲ್ಕು ಇರುವ ಐದು ಖಾತೆಗಳನ್ನು ಮುಕ್ತಾಯಗೊಳಿಸಲಾಗಿದ್ದು ವರ್ಷದ ಅಂತ್ಯದ ವೇಳೆಗೆ 71 ವೈಯಕ್ತಿಕ ಠೇವಣಿ ಖಾತೆಗಳು ಅಸ್ತಿತ್ವದಲ್ಲಿವೆ. 2020-21ರಲ್ಲಿ ವೈಯಕ್ತಿಕ ಠೇವಣಿ ಖಾತೆಗಳಿಗೆ ಜಮೆಯಾದ ₹4,711.16 ಕೋಟಿಗಳಲ್ಲಿ ₹1,358.86 ಕೋಟಿಗಳನ್ನು ಮಾರ್ಚ್ 2021ರಲ್ಲೇ ವರ್ಗಾಯಿಸಲಾಗಿದೆ. ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮುಕ್ತಾಯದ ಶಿಲ್ಕು 2019-20ಕ್ಕೆ ಹೋಲಿಸಿದರೆ 2020-21ರಲ್ಲಿ ಶೇಕಡ 9.7ರಷ್ಟು ಕಡಿಮೆಯಾಗಿದೆ.

2020-21ರ ಅಂತ್ಯದ ವೇಳೆಗೆ ಹೆಚ್ಚು ಶಿಲ್ಕುಗಳನ್ನು ಹೊಂದಿರುವ ಕೆಲವು ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳಿಗೆ ಸಂಬಂಧಿಸಿದಂತೆ ನಿವ್ವಳ ಮುಕ್ತಾಯದ ಶಿಲ್ಕನ್ನು **ಕೋಷ್ಟಕ-4.6**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–4.6: ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಆಡಳಿತಾಧಿಕಾರಿ | ಮೊತ್ತ |
|---|---|---|
| 1 | ವೈಯಕ್ತಿಕ ಠೇವಣಿಗಳು – ಸಾಮಾನ್ಯ | 378.12 |
| 2 | ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳು | 8,640.33 |
| 3 | ನಿರ್ದೇಶಕರು, ಪರಿಶಿಷ್ಟ ಪಂಗಡ ಇಲಾಖೆ ಅವರ ವೈಯಕ್ತಿಕ ಠೇವಣಿಗಳು | 368.66 |
| 4 | ಕಂದಾಯ ಇಲಾಖೆಯ ಅಸಿಸ್ಟಂಟ್ ಕಮೀಷನರ್– ವೈಯಕ್ತಿಕ ಠೇವಣಿಗಳು | 265.05 |

*ಆಕರ: ಡಿಡಿಆರ್ ಲೆಡ್ಜರ್*

ತುಮಕೂರು ಪೌರಾಡಳಿತ ಮತ್ತು ಆಹಾರ ಮತ್ತು ನಾಗರಿಕ ಸರಬರಾಜು (ಆಗಸ್ಟ್ 2021) ಕಚೇರಿಗಳ ಲೆಕ್ಕ ಪರಿಶೋಧನೆಯ ಸಮಯದಲ್ಲಿ, ಉಪ ಆಯುಕ್ತರ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು ಈ ಕೆಳಗಿನವುಗಳನ್ನು ಒಳಗೊಂಡಿರುವುದನ್ನು ಗಮನಿಸಲಾಗಿದೆ:

- ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಸಂಬಂಧಿಸಿದ ₹20.00 ಲಕ್ಷಗಳ ಮೊತ್ತವನ್ನು ಸೆಪ್ಟೆಂಬರ್ 2003ರಲ್ಲಿ ಠೇವಣಿ ಮಾಡಲಾಗಿದ್ದು 18 ವರ್ಷಗಳಿಗೂ ಹೆಚ್ಚು ಕಾಲದಿಂದ ಖಾತೆಯು (ಆಗಸ್ಟ್ 2021ರಂತೆ) ನಿಷ್ಕ್ರಿಯವಾಗಿದೆ. ಆದರೆ, ಯಾವ ಉದ್ದೇಶಕ್ಕಾಗಿ ಹಣವನ್ನು ಬಿಡುಗಡೆ ಮಾಡಿ ವೈಯಕ್ತಿಕ ಠೇವಣಿ ಖಾತೆಗೆ ಜಮಾ ಮಾಡಲಾಗಿದೆ ಎಂಬುದು ಲೆಕ್ಕ ಪರಿಶೋಧನೆಗೆ ಲಭ್ಯವಾಗಿರುವ ದಾಖಲೆಗಳಿಂದ ತಿಳಿದುಬಂದಿಲ್ಲ. ಇಲಾಖೆಯು ತನ್ನ ಉತ್ತರದಲ್ಲಿ (ಆಗಸ್ಟ್ 2021) ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಹಿಂತಿರುಗಿಸಲು ಕ್ರಮವನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದೆ.
- 2020–21ರಲ್ಲಿ, ಹದಿನೈದನೆಯ ಹಣಕಾಸು ಆಯೋಗದ ನಗರ ಸ್ಥಳೀಯ ಸಂಸ್ಥೆಗಳ ಅನುದಾನದಡಿ ರಾಜ್ಯದಲ್ಲಿ ಸ್ವೀಕೃತವಾದ ₹1,549 ಕೋಟಿಗಳಲ್ಲಿ ₹991 ಕೋಟಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗೆ ಜಮಾ ಮಾಡಲಾಗಿತ್ತು. ಈ ಮೊತ್ತದಲ್ಲಿ ಕೇವಲ ₹80.04 ಕೋಟಿಗಳ ಬಳಕೆ ಮಾಡಲಾಗಿದ್ದು, ₹910.96 ಕೋಟಿಗಳು (ಶೇಕಡ 92) ವೈಯಕ್ತಿಕ ಠೇವಣಿ ಖಾತೆಗಳಲ್ಲಿ ವೆಚ್ಚವಾಗದೆ ಉಳಿದಿದೆ.
- ಹದಿನೈದನೆಯ ಹಣಕಾಸು ಆಯೋಗದ ಅನುದಾನಗಳಲ್ಲದೆ ವೈಯಕ್ತಿಕ ಠೇವಣಿ ಖಾತೆಗಳ ಮುಕ್ತಾಯದ ಶಿಲ್ಕು **ಕೋಷ್ಟಕ–4.7**ರಲ್ಲಿ ಸೂಚಿಸಿರುವಂತೆ ₹1,405.21 ಕೋಟಿಗಳ ಬಳಕೆಯಾಗದ ಮೊತ್ತವನ್ನು ಒಳಗೊಂಡಿದೆ.

**ಕೋಷ್ಟಕ–4.7: ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗಗಳ ಬಳಕೆಯಾಗದ ಮೊತ್ತಗಳು ಮತ್ತು ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಇತರ ನಿಧಿಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನದ ಮಾದರಿ | ಬಳಕೆಯಾಗದ ಮೊತ್ತ |
|---|---|---|
| 1. | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ 13ನೆಯ ಹಣಕಾಸು ಆಯೋಗದ ಅನುದಾನ | 12.22 |
| 2. | 14ನೆಯ ಹಣಕಾಸು ಆಯೋಗದ ಅನುದಾನ (ಮೂಲ ಮತ್ತು ಕಾರ್ಯಸಾಧನಾ) | 773.80 |
| 3 | ರಾಜ್ಯ ಹಣಕಾಸು ಆಯೋಗದ ಅನುದಾನ – ಮುಕ್ತ ಅನುದಾನ, ಕುಡಿಯುವ ನೀರಿನ ಅಭಾವ ಅನುದಾನ ಮತ್ತು ವಿಶೇಷ ಅನುದಾನ, | 393.98 |
| 4 | ಅಂಗನವಾಡಿ ನಿರ್ಮಾಣ, ಸ್ವಚ್ಛ ಭಾರತ ಮಿಷನ್ ಮುಂತಾದ ಇತರ ವಿವಿಧ ಅನುದಾನಗಳು | 225.21 |
| | ಒಟ್ಟು | **1,405.21** |

ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ₹8,640.33 ಕೋಟಿಗಳ ಬಳಕೆಯಾಗದ ಅಂತಿಮ ಶಿಲ್ಕಿನಲ್ಲಿ ಸುಮಾರು ಶೇಕಡ 27ರಷ್ಟು ಮೊತ್ತವು ಹಣಕಾಸು ಆಯೋಗದ ಅನುದಾನ, ಯೋಜನೆಗಳು, ಇತ್ಯಾದಿಗಳಿಗೆ ಸಂಬಂಧಿಸಿದ್ದು ಇದನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗಿದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021), ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಸೆಪ್ಟಂಬರ್ 2003ರಿಂದ ತಮ್ಮ ವೈಯಕ್ತಿಕ ಠೇವಣಿ ಖಾತೆಯಲ್ಲಿ ಬಳಕೆಯಾಗದೆ ಉಳಿದಿರುವ ₹20 ಲಕ್ಷಗಳನ್ನು ಜಮೆ ಮಾಡಲು ವಿನಂತಿಸಲಾಗುವುದು ಮತ್ತು ನಗರಾಭಿವೃದ್ಧಿ ಇಲಾಖೆಯನ್ನೂ ಸಹ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಯಲ್ಲಿ ಇಡಲಾಗಿರುವ ₹910.96 ಕೋಟಿಗಳ ಬಳಕೆಯಾಗದ ಮೊತ್ತವನ್ನು ಮರುಪಾವತಿಸಲು ವಿನಂತಿಸಲಾಗುವುದು ಎಂದು ಹೇಳಿದೆ.

ಆದಾಗ್ಯೂ, ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗಗಳ ಅನುದಾನ ಮತ್ತು ಇತರ ಜಮೆಗಳಲ್ಲಿ ಬಳಕೆಯಾಗದೆ ಉಳಿದಿರುವ ಇತರ ನಿಧಿಗಳ (₹1,405.21 ಕೋಟಿ) ಬಗ್ಗೆ ಇಲಾಖೆಯ ಉತ್ತರವು ಮೌನವಾಗಿದೆ.

### *4.4.2 ನಿಷ್ಕ್ರಿಯ ಮತ್ತು ಲೆಕ್ಕ ಹೊಂದಾಣಿಕೆ ಮಾಡದ ವೈಯಕ್ತಿಕ ಠೇವಣಿ ಖಾತೆಗಳು*

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286A ಪ್ರಕಾರ, ರಾಜ್ಯ ಸರ್ಕಾರವು ಗಣನೀಯ ಅವಧಿಯವರೆಗೆ ನಿಷ್ಕ್ರಿಯವಾಗಿರುವ ಎಲ್ಲಾ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಕ್ತಾಯಗೊಳಿಸುವ ಅಗತ್ಯವಿದೆ. 2021ರ ಹಣಕಾಸು ಲೆಕ್ಕಗಳಿಗೆ ಟಿಪ್ಪಣಿಯಲ್ಲಿ ಹೇಳಿರುವಂತೆ, 71 ವೈಯಕ್ತಿಕ ಠೇವಣಿ ಖಾತೆಗಳಲ್ಲಿ, 24 ಖಾತೆಗಳು (₹50.73 ಕೋಟಿಗಳ ಜಮೆ ಶಿಲ್ಕು ಇರುವ 14 ವೈಯಕ್ತಿಕ ಠೇವಣಿ ಖಾತೆಗಳು, ₹2.02 ಕೋಟಿಗಳ ಖರ್ಚು ಶಿಲ್ಕು ಇರುವ ಎಂಟು ವೈಯಕ್ತಿಕ ಠೇವಣಿ ಖಾತೆಗಳು ಮತ್ತು ಶೂನ್ಯ ಶಿಲ್ಕಿನ ಎರಡು ವೈಯಕ್ತಿಕ ಠೇವಣಿ ಖಾತೆಗಳು) ಮೂರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ನಿಷ್ಕ್ರಿಯವಾಗಿತ್ತು (**ಅನುಬಂಧ 4.2**). ಆಡಳಿತಾಧಿಕಾರಿಗಳು ಈ ಶಿಲ್ಕುಗಳನ್ನು ವಿಶ್ಲೇಷಿಸಿ ಮತ್ತು ಲೆಕ್ಕಹೊಂದಾಣಿಕೆ ಮಾಡಿ ಖಾತೆಗಳನ್ನು ಮುಕ್ತಾಯಗೊಳಿಸಿ ಶಿಲ್ಕುಗಳನ್ನು ರಾಜ್ಯದ ಸಂಚಿತ ನಿಧಿಗೆ ಹಿಂತಿರುಗಿಸಲು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಆರ್ಥಿಕ ಇಲಾಖೆಯು, ಮೂರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಬಳಸದೆ ಶಿಲ್ಕು ಉಳಿದಿರುವಂತಹ ವೈಯಕ್ತಿಕ ಠೇವಣಿ ಖಾತೆಗಳನ್ನು ಪರಿಶೀಲಿಸಲು ಮತ್ತು ಅಂಥಹ ಖಾತೆಗಳನ್ನು ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲು ಸಂಬಂಧಿಸಿದ ಆಡಳಿತಾಧಿಕಾರಿಗಳು ಮತ್ತು ಇಲಾಖೆಗಳ ಮುಖ್ಯಸ್ಥರನ್ನು ವಿನಂತಿಸಲಾಗಿದೆ ಎಂದು ಉತ್ತರಿಸಿದೆ (ಡಿಸೆಂಬರ್ 2021).

## ಸಿ. ಮಾಪನಗಳಿಗೆ ಸಂಬಂಧಿಸಿದ ವ್ಯಾಖ್ಯಾನಗಳು

## 4.5 ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು

### *4.5.1 ಪ್ರಮುಖ ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು*

ಸರ್ಕಾರದ ಲೆಕ್ಕಗಳನ್ನು ನಗದು ಆಧಾರದ ಮೇಲೆ ಇರಿಸಲಾಗುತ್ತದೆ. ಸ್ವೀಕೃತಿಗಳು ಮತ್ತು ಪಾವತಿಗಳ ವಹಿವಾಟುಗಳನ್ನು ಅವುಗಳ ಸ್ವರೂಪದ ಮಾಹಿತಿಯ ಕೊರತೆಯಿಂದಾಗಿ ಅಥವಾ ಇತರ ಕಾರಣಗಳಿಗಾಗಿ ಲೆಕ್ಕದ ಅಂತಿಮ ಶೀರ್ಷಿಕೆಗೆ ಜಮೆ/ಖರ್ಚು ಹಾಕಲಾಗುವುದಿಲ್ಲ. ಇಂತಹ ವಹಿವಾಟುಗಳನ್ನು ಪ್ರತಿಬಿಂಬಿಸಲು 'ಅಮಾನತ್ತು' ಎಂದು ಕರೆಯಲ್ಪಡುವ ಕೆಲವು ತಾತ್ಕಾಲಿಕ/ಹೊಂದಾಣಿಕೆ ಲೆಕ್ಕಗಳ ಶೀರ್ಷಿಕೆಗಳನ್ನು ಸರ್ಕಾರಿ ಲೆಕ್ಕಗಳಲ್ಲಿ ನಿರ್ವಹಿಸಲಾಗುತ್ತದೆ. ಈ ಅಮಾನತ್ತು ಲೆಕ್ಕವು ಅಂತಿಮವಾಗಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಡಿ ಖರ್ಚಿನ ಕಳೆಯುವಿಕೆ ಅಥವಾ ಜಮೆಯ ಕಳೆಯುವಿಕೆಯ ಮೂಲಕ ಲೆಕ್ಕ ಹಾಕಿ ತೀರಿಕೆ ಮಾಡಲಾಗುತ್ತದೆ. ಈ ಮೊತ್ತಗಳು ತೀರಿಕೆಯಾಗದೆ ಉಳಿದಿದ್ದರೆ, ಅಮಾನತ್ತು ಶೀರ್ಷಿಕೆಯಲ್ಲಿ ಶಿಲ್ಕುಗಳು ಸಂಗ್ರಹವಾಗುತ್ತವೆ ಮತ್ತು ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳು ನಿಖರವಾಗಿ ಪ್ರತಿಬಿಂಬಿತವಾಗುವುದಿಲ್ಲ. ಪ್ರಧಾನ ಮಹಾಲೇಖಪಾಲರು (ಲೆ ಮತ್ತು ಹ) ಅವರು ನಿರ್ವಹಿಸಿರುವ

ಲೆಡ್ಜರ್‌ನಲ್ಲಿ ದಾಖಲಿಸಲಾದ ಲೆಕ್ಕಗಳ ಕೆಲವು ಪ್ರಮುಖ ಅಮಾನತ್ತುಗಳನ್ನು **ಕೋಷ್ಟಕ – 4.8**ರಲ್ಲಿ ಸೂಚಿಸಲಾಗಿದೆ.

ಸರ್ಕಾರವು, ಸಾರ್ವಜನಿಕ ಹಣದ ಪಾಲಕನಾಗಿ ಅವುಗಳನ್ನು ಸ್ವೀಕರಿಸಿ ನಂಬಿಕೆಯಲ್ಲಿ ಇರಿಸುವ ವ್ಯವಹಾರಗಳನ್ನು ಸಾಲ, ಠೇವಣಿ ಮತ್ತು ಇರಸಾಲು (ಡಿಡಿಆರ್)ಗಳ ಲೆಕ್ಕಶೀರ್ಷಿಕೆಗಳಲ್ಲಿ ನಿರ್ವಹಿಸುತ್ತದೆ.

2020–21ರ ರಾಜ್ಯ ಹಣಕಾಸು ಖಾತೆಗಳ ನಿಖರತೆಯು ಕೆಳಗೆ ಕಾಣಿಸಿರುವಂತಹ ಅಂಶಗಳಿಂದ ಪ್ರತಿಕೂಲವಾಗಿ ಬಾಧಿತವಾಗಿದೆ.

(i) ಅಂತಿಮ ವರ್ಗೀಕರಣಕ್ಕಾಗಿ ಕಾಯುತ್ತಿರುವ ಹೆಚ್ಚಿನ ಸಂಖ್ಯೆಯ ಅಮಾನತ್ತು ವಹಿವಾಟುಗಳು.

(ii) ಸಾಲ ಠೇವಣಿ ಇರಸಾಲುಗಳ ಲೆಕ್ಕ ಶೀರ್ಷಿಕೆಯಲ್ಲಿ ಹೆಚ್ಚಿದ ವ್ಯತಿರಿಕ್ತ ಶಿಲ್ಕುಗಳ ಪ್ರಮಾಣ ಮತ್ತು ಮೊತ್ತ.

**ಕೋಷ್ಟಕ 4.8: ಅಮಾನತ್ತು ಶೀರ್ಷಿಕೆಗಳಡಿಯ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ಕಿರು ಲೆಕ್ಕಶೀರ್ಷಿಕೆ | 2018–19 | | 2019–20 | | 2020–21 | |
|---|---|---|---|---|---|---|
| ಪ್ರಮುಖ ಲೆಕ್ಕಶೀರ್ಷಿಕೆ 8658–ಅಮಾನತ್ತು | ಖರ್ಚು | ಜಮೆ | ಖರ್ಚು | ಜಮೆ | ಖರ್ಚು | ಜಮೆ |
| 101– ಪಾವತಿ ಮತ್ತು ಲೆಕ್ಕ ಕಚೇರಿ ಅಮಾನತ್ತು | 288.08 | 16.93 | 270.30 | 10.86 | 283.51 | 3.40 |
| ನಿವ್ವಳ | ಖರ್ಚು 271.15 | | ಖರ್ಚು 259.44 | | ಖರ್ಚು 280.11 | |
| 102– ಅಮಾನತ್ತು ಲೆಕ್ಕ (ಸಿವಿಲ್) | 17.76 | 296.45 | 18.14 | 414.95 | 18.42 | 378.75 |
| ನಿವ್ವಳ | ಜಮೆ 278.69 | | ಜಮೆ 396.81 | | ಜಮೆ 360.33 | |
| 107–ನಗದು ತೀರುವಳಿ ಅಮಾನತ್ತು ಲೆಕ್ಕ | 20.53 | | 20.53 | | 20.53 | – |
| ನಿವ್ವಳ | ಖರ್ಚು 20.53 | | ಖರ್ಚು 20.53 | | ಖರ್ಚು 20.53 | |
| 110–ರಿಸರ್ವ್ ಬ್ಯಾಂಕ್ ಅಮಾನತ್ತು ಕೇಂದ್ರ ಲೆಕ್ಕ ಕಚೇರಿ | 91.41 | 183.28 | 17.59 | 154.67 | 72.61 | 53.35 |
| ನಿವ್ವಳ | ಜಮೆ 91.87 | | ಜಮೆ .137.08 | | ಖರ್ಚು 19.26 | |
| 112–ಮೂಲದಲ್ಲಿ ಕಳೆದ ತೆರಿಗೆ (ಟಿಡಿಎಸ್) ಅಮಾನತ್ತು | 204.16 | 233.34 | 0.74 | 32.77 | 0.74 | 4.75 |
| ನಿವ್ವಳ | ಜಮೆ .29.18 | | ಜಮೆ 32.03 | | ಜಮೆ 4.01 | |
| 123– ಎಐಎಸ್ ಅಧಿಕಾರಿಗಳ ಸಮೂಹ ವಿಮಾ ಯೋಜನೆ | 9.30 | | 1.00 | | 1.28 | – |
| ನಿವ್ವಳ | ಖರ್ಚು .9.30 | | ಖರ್ಚು 1.00 | | ಖರ್ಚು 1.28 | |
| 8782–ನಗದು ರವಾನೆಗಳು | | | | | | |
| 102–01 ಖಜಾನೆಗೆ ಸಾರ್ವಜನಿಕ ಕಾಮಗಾರಿಗಳ ಇರಸಾಲುಗಳು | 82.61 | – | 82.61 | – | 82.61 | – |
| ನಿವ್ವಳ | ಖರ್ಚು 82.61 | | ಖರ್ಚು 82.61 | | ಖರ್ಚು 82.61 | |
| 103–01 ಖಜಾನೆಗೆ ಅರಣ್ಯ ಇರಸಾಲುಗಳು | 12.13 | – | 12.13 | – | 12.13 | – |
| ನಿವ್ವಳ | ಖರ್ಚು 12.13 | | ಖರ್ಚು 12.13 | | ಖರ್ಚು 12.13 | |

*ಆಕರ : ಡಿಡಿಆರ್ ಲೆಡ್ಜರುಗಳು*

ಹಣಕಾಸು ಲೆಕ್ಕಗಳು ಈ ಶೀರ್ಷಿಕೆಗಳ ಅಡಿಯಲ್ಲಿ ನಿವ್ವಳ ಶಿಲ್ಕುಗಳನ್ನು ಪ್ರತಿಬಿಂಬಿಸುತ್ತವೆ. ಬಾಕಿ ಇರುವ ಖರ್ಚು ಮತ್ತು ಜಮೆ ಶಿಲ್ಕುಗಳನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸುವ ಮೂಲಕ ಬಾಕಿ ಉಳಿದಿರುವ ಶಿಲ್ಕುಗಳನ್ನು ಲೆಕ್ಕ ಮಾಡಲಾಗುತ್ತದೆ. ಈ ಶೀರ್ಷಿಕೆಗಳ ಅಡಿಯಲ್ಲಿರುವ ಶಿಲ್ಕುಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

- **ಪಾವತಿ ಮತ್ತು ಲೆಕ್ಕ ಕಚೇರಿ ಅಮಾನತ್ತು**

ಭಾರತ ಸರ್ಕಾರದ ವಿವಿಧ ಪ್ರತ್ಯೇಕ ಪಾವತಿ ಮತ್ತು ಲೆಕ್ಕ ಕಚೇರಿಗಳು ಮತ್ತು ಪ್ರಧಾನ ಮಹಾಲೇಖಾಪಾಲರ ನಡುವಿನ ವಹಿವಾಟುಗಳ ಇತ್ಯರ್ಥ ಈ ಶೀರ್ಷಿಕೆಯ ಉದ್ದೇಶವಾಗಿದೆ. ಪ್ರಧಾನ ಮಹಾಲೇಖಾಪಾಲರ ಪುಸ್ತಕಗಳಲ್ಲಿ ಈ ಶೀರ್ಷಿಕೆಯಲ್ಲಿ ಆರಂಭದಲ್ಲಿ ದಾಖಲಿಸಲಾದ ವಹಿವಾಟುಗಳನ್ನು ಪಾವತಿ ಮತ್ತು ಲೆಕ್ಕ

ಕಚೇರಿಗಳಿಂದ ಚೆಕ್/ಡಿಮಾಂಡ್ ಡ್ರಾಫ್ಟ್‌ಗಳ ಸ್ವೀಕೃತಿಯ ಮೇಲೆ ಮತ್ತು ಪಾವತಿ ಮತ್ತು ಲೆಕ್ಕ ಕಚೇರಿಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ಸ್ವೀಕರಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ ಚೆಕ್/ ಡಿಮಾಂಡ್ ಡ್ರಾಫ್ಟ್‌ಗಳ ವಿತರಣೆಯ ಮೇಲೆ ಇತ್ಯರ್ಥಗೊಳಿಸಲಾಗುತ್ತದೆ. ಈ ಶೀರ್ಷಿಕೆಯ ಅಡಿಯಲ್ಲಿಬಾಕಿ ಉಳಿದಿರುವ ಖರ್ಚು ಶಿಲ್ಕು ಎಂದರೆ ಪಾವತಿ ಮತ್ತು ಲೆಕ್ಕ ಕಚೇರಿಗಳ ಪರವಾಗಿ ಪ್ರಧಾನ ಮಹಾಲೇಖಾಪಾಲರು ಮಾಡಿರುವ ಪಾವತಿಗಳು ಇನ್ನೂ ಮರು ಪಡೆಯಲು ಬಾಕಿ ಉಳಿದಿರುವುದು. ಬಾಕಿ ಉಳಿದಿರುವ ಜಮೆ ಶಿಲ್ಕು ಎಂದರೆ ಪಾವತಿ ಮತ್ತು ಲೆಕ್ಕ ಕಚೇರಿಗಳ ಪರವಾಗಿ ಮಹಾಲೇಖಾಪಾಲರು ಸ್ವೀಕರಿಸಲಾದ ಮೊತ್ತಗಳು ಇನ್ನೂ ಪಾವತಿಸಬೇಕಾಗಿದೆ. ಈ ಶೀರ್ಷಿಕೆ ಅಡಿಯಲ್ಲಿ ನಿವ್ವಳ ಖರ್ಚು ಶಿಲ್ಕು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ. ಇದರ ತೀರಿಕೆ/ಇತ್ಯರ್ಥ ಆದ ಮೇಲೆ, ರಾಜ್ಯ ಸರ್ಕಾರದ ನಗದು ಶಿಲ್ಕು ಹೆಚ್ಚಾಗುತ್ತದೆ. ಈ ಬಾಬ್ತು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದ ವಹಿವಾಟುಗಳು ಮತ್ತು ಕೇಂದ್ರ ಸರ್ಕಾರದ ಸಿವಿಲ್ ಪಿಂಚಣಿ ದಾರರಿಗೆ ರಾಜ್ಯ ಸರ್ಕಾರದಿಂದ ಮಾಡಿದ ಪಾವತಿಗಳಿಗೆ ಸಂಬಂಧಿಸಿದೆ.

- **ಅಮಾನತ್ತು ಲೆಕ್ಕ (ಸಿವಿಲ್)**

ವರ್ಗೀಕರಣದ ಸಂಪೂರ್ಣ ವಿವರಗಳು ಲಭ್ಯವಿಲ್ಲದ ವಹಿವಾಟುಗಳು, ಅಥವಾ ಅದಕ್ಕೆ ಪೂರಕವಾದ ಸಂಬಂಧಿತ ವೋಚರ್‌ಗಳು/ಅನುಸೂಚಿಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ ಪಾವತಿ / ನಗದು ಲೆಕ್ಕಗಳ ಖಜಾನೆ ಅನುಸೂಚಿಗಳಲ್ಲಿ ವರದಿ ಮಾಡಲಾದ ಅಂಕಿಗಳು ಮತ್ತು ಪೂರಕ ವೋಚರ್‌ಗಳಲ್ಲಿ ಕಂಡು ಬರುವ ಅಂಕಿಗಳ ನಡುವೆ ವ್ಯತ್ಯಾಸಗಳಿದ್ದರೆ ಇತ್ಯಾದಿಗಳು ಈ ಶೀರ್ಷಿಕೆಯಲ್ಲಿ ಬಾಕಿ ಇರುವ ಅಂಕಿಗಳ ಪ್ರಮುಖ ಭಾಗವಾಗಿರುತ್ತದೆ. ರೈಲ್ವೇ, ರಕ್ಷಣಾ ಮತ್ತು ಅಂಚೆ ಮತ್ತು ದೂರ ಸಂಪರ್ಕ ಇಲಾಖೆಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ನಡೆಯುವ ವಹಿವಾಟುಗಳನ್ನು ಸಂಬಂಧಿಸಿದ ಅಧಿಕಾರಿಗಳು ಬಾಕಿಗಳನ್ನು ಇತ್ಯರ್ಥಗೊಳಿಸುವವರೆಗೆ ಆರಂಭದಲ್ಲಿ ಈ ಶೀರ್ಷಿಕೆಯಡಿ ವರ್ಗೀಕರಿಸಲಾಗುತ್ತದೆ. ಈ ಶೀರ್ಷಿಕೆ ಅಡಿಯಲ್ಲಿ ನಿವ್ವಳ ಜಮೆ ಶಿಲ್ಕು ವರ್ಷದಲ್ಲಿ ₹36.48 ಕೋಟಿಗಳು ಕಡಿಮೆಯಾಗಿದೆ. ರೈಲ್ವೆ ಲೆಕ್ಕಗಳು (₹3.15 ಕೋಟಿ) ಮತ್ತು ರಕ್ಷಣಾ ಲೆಕ್ಕಗಳು (₹1.85 ಕೋಟಿ) ಸಂಬಂಧಿಸಿದಂತೆ, ಅಮಾನತ್ತು ಇತ್ಯರ್ಥದ ನಂತರ ನಗದು ಶಿಲ್ಕು ಹೆಚ್ಚಾಗುತ್ತದೆ. ಉಳಿದವುಗಳಿಗೆ ಸಂಬಂಧಿಸಿದಂತೆ ನಗದು ಶಿಲ್ಕಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

- **ರಿಸರ್ವ್ ಬ್ಯಾಂಕ್ ಅಮಾನತ್ತು ಕೇಂದ್ರ ಲೆಕ್ಕ ಕಚೇರಿ**

ರಿಸರ್ವ್ ಬ್ಯಾಂಕ್ ಕೇಂದ್ರ ಲೆಕ್ಕ ಕಚೇರಿ ವಿಭಾಗಕ್ಕೆ ಸೂಚನೆಯನ್ನು ಕಳುಹಿಸುವ ಮೂಲಕ ಎರಡು ಸರ್ಕಾರಗಳ ನಗದು ಶಿಲ್ಕುಗಳ ನಡುವೆ ಹಣ ಇತ್ಯರ್ಥವನ್ನು ಮಾಡುವ ಅಂತರ–ಸರ್ಕಾರಿ ವಹಿವಾಟುಗಳನ್ನು ದಾಖಲಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. ರಿಸರ್ವ್ ಬ್ಯಾಂಕ್ ಮಾಡಿದ ಹಣ ಇತ್ಯರ್ಥ ಸೂಚನೆಯ ಸ್ವೀಕೃತಿಯ ಮೇಲೆ ಮೊತ್ತವನ್ನು ಲೆಕ್ಕದ ಅಂತಿಮ ಶೀರ್ಷಿಕೆಗೆ ವರ್ಗಾಯಿಸುವ ಮೂಲಕ ಈ ಅಮಾನತ್ತು ಶೀರ್ಷಿಕೆಯನ್ನು ಚುಕ್ತಗೊಳಿಸಲಾಗುತ್ತದೆ. ಭಾರತ ಸರ್ಕಾರದಿಂದ ಪಡೆದ ಅನುದಾನ, ಸಾಲಗಳು ಮತ್ತು ಸಾಲಗಳ ಮರುಪಾವತಿಗಳು, ಭದ್ರತೆಗಳ ವಿಮುಕ್ತತೆ ಮತ್ತು ಬ್ಯಾಂಕಿನ ಸಾರ್ವಜನಿಕ ಋಣ ಕಚೇರಿಗಳು ಪಾವತಿಸಿದ ಅವುಗಳ ಮೇಲಿನ ಬಡ್ಡಿ ಪಾವತಿ ಮತ್ತು ಪೂರೈಕೆ ಮತ್ತು ವಿಲೇವಾರಿಗಳ ಮಹಾ ನಿರ್ದೇಶಕರು ಸರ್ಕಾರಿ ಇಲಾಖೆಗಳಿಗೆ ಸರಬರಾಜು ಮಾಡಿದ ಸಾಮಗ್ರಿಗಳ ಪಾವತಿಗಳು ಈ ಅಮಾನತ್ತು ಶೀರ್ಷಿಕೆಯ ಮೂಲಕ ಇತ್ಯರ್ಥಗೊಳ್ಳುವ ಪ್ರಮುಖ ವಹಿವಾಟುಗಳು. 2020–21ರಲ್ಲಿ, ಈ ಶೀರ್ಷಿಕೆಯಡಿ ಖರ್ಚು ಶಿಲ್ಕು ₹19.26 ಕೋಟಿಗಳಷ್ಟಿದ್ದು ಹಿಂದಿನ ವರ್ಷಕ್ಕೆ ಹೋಲಿಸಿದರೆ ₹156.34 ಕೋಟಿಗಳು ಕಡಿಮೆಯಾಗಿದೆ.

- **ಖಜಾನೆಗೆ ಸಾರ್ವಜನಿಕ ಕಾಮಗಾರಿಗಳ ಇರಸಾಲುಗಳು**

ಸಾರ್ವಜನಿಕ ಕಾಮಗಾರಿಗಳ ವಿಭಾಗೀಯ ಅಧಿಕಾರಿಗಳು ಇರಸಾಲು ಮಾಡಿದ ಮೊತ್ತವನ್ನು ಖಜಾನೆಯಲ್ಲಿ ಅಂಗೀಕರಿಸಲಾಗಿದೆಯೇ ಎಂಬುದನ್ನು ಗಮನಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. 2020–21ನೇ ವರ್ಷದ ಅಂತ್ಯದಲ್ಲಿ ₹82.61 ಕೋಟಿಗಳ ಖರ್ಚು ಶಿಲ್ಕು

ವಿಭಾಗೀಯ ಕಚೇರಿಗಳು ಖಜಾನೆಯೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳದ ಕಾರಣ ಉಂಟಾಗಿದ್ದು ಮತ್ತು ಈ ವ್ಯತ್ಯಾಸಗಳು ದುರುಪಯೋಗ ಪ್ರಕರಣಗಳಿದ್ದಲ್ಲಿ ಪತ್ತೆ ಹಚ್ಚದಿರಲು ಕಾರಣವಾಗಬಹುದಾಗಿದ್ದು, ಸರ್ಕಾರಕ್ಕೆ ನಷ್ಟವನ್ನು ಉಂಟು ಮಾಡಬಹುದು.

- **ಖಜಾನೆಗೆ ಅರಣ್ಯ ಇರಸಾಲುಗಳು**

ಅರಣ್ಯ ವಿಭಾಗಗಳ ಮೂಲಕ ಅರಣ್ಯ ಆದಾಯ ಸಂಗ್ರಹಣೆ ಮತ್ತು ಖಜಾನೆಯಲ್ಲಿ ಸರ್ಕಾರಿ ಲೆಕ್ಕಗಳಿಗೆ ಅವುಗಳ ಜಮೆಯು ಆರಂಭದಲ್ಲಿ ಈ ನಡೆಯುತ್ತದೆ. ಹಣ ಇರಸಾಲುಗಳನ್ನು ಖಜಾನೆ ಅಧಿಕಾರಿಗಳು ಒಪ್ಪಿಕೊಂಡು ಲೆಕ್ಕಹಾಕಿದ ನಂತರ ಖಜಾನೆ ಲೆಕ್ಕಗಳಲ್ಲಿ ಕಾಣಿಸಿಕೊಳ್ಳುವ ಈ ಶೀರ್ಷಿಕೆಯ ಅಡಿಯಲ್ಲಿನ ಖರ್ಚುಗಳು ಜಮೆಗಳಿಂದ ತೀರುವಳಿಗೊಳ್ಳುತ್ತವೆ ಆದಾಯದ ನಿಜವಾದ ವಸೂಲಿ ಮತ್ತು ಖಜಾನೆಗೆ ಅದರ ಜಮೆಯ ನಡುವಿನ ಸಮಯದ ವಿಳಂಬದಿಂದಾಗಿ, ಈ ಶೀರ್ಷಿಕೆಯ ಅಡಿಯಲ್ಲಿ ವಿಭಾಗದ ಲೆಕ್ಕ ಗಳಲ್ಲಿ ಕಾಣಿಸಿಕೊಳ್ಳುವ ಖರ್ಚುಗಳು ಜಮೆ ಮಾಡಿದ ಹಣವು ಅಂತಿಮವಾಗಿ ಖಜಾನೆ ಲೆಕ್ಕಗಳಲ್ಲಿ ಲೆಕ್ಕಹಾಕುವವರೆಗೆ ಕಾಣಿಸಿಕೊಳ್ಳುತ್ತದೆ. ಈ ಶೀರ್ಷಿಕೆಯ ಅಡಿಯಲ್ಲಿ 2020–21ರ ಅಂತ್ಯದಲ್ಲಿ ₹12.13 ಕೋಟಿಗಳ ಖರ್ಚು ಶಿಲ್ಕು ಇದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಈ ಕೆಳಗಿನಂತೆ ಉತ್ತರಿಸಿದೆ:

- ಪಾವತಿ ಮತ್ತು ಲೆಕ್ಕ ಕಚೇರಿ ಅಮಾನತ್ತು (ಸಿವಿಲ್) ಮತ್ತು ರಿಸರ್ವ್ ಬ್ಯಾಂಕ್ ಕೇಂದ್ರ ಲೆಕ್ಕ ಕಚೇರಿ ಅಮಾನತ್ತು ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳ ತೀರುವಳಿಗಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಂತೆ ಮಹಾಲೇಖಾಪಾಲ(ಲೆ ಮತ್ತು ಹ)ರಿಗೆ ವಿನಂತಿಸಲಾಗುವುದು.
- ಖಜಾನೆಗೆ ಸಾರ್ವಜನಿಕ ಕಾಮಗಾರಿಗಳು ಮತ್ತು ಅರಣ್ಯ ಇರಸಾಲುಗಳಿಗೆ ಸಂಬಂಧಿಸಿದಂತೆ, ಈ ಇಲಾಖೆಗಳು ಲೆಕ್ಕ ಸಮನ್ವಯಗೊಳಿಸಲು ಮತ್ತು ಬಾಕಿ ಉಳಿದಿರುವ ಶಿಲ್ಕುಗಳನ್ನು ತೀರುವಳಿ ಗೊಳಿಸಲು ವಿನಂತಿಸಲಾಗುವುದು.

### *4.5.2 ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು*

ಋಣಾತ್ಮಕ ಶಿಲ್ಕುಗಳು ಇರಬಾರದ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಋಣಾತ್ಮಕ ಶಿಲ್ಕುಗಳು ಇದ್ದರೆ ಅವು ವ್ಯತಿರಿಕ್ತ ಶಿಲ್ಕುಗಳು ಎನಿಸಿಕೊಳ್ಳುತ್ತವೆ. ಉದಾಹರಣೆಗೆ, ಯಾವುದೇ ಸಾಲ ಅಥವಾ ಮುಂಗಡದ ಲೆಕ್ಕ ಶೀರ್ಷಿಕೆಯಡಿಯ ಋಣಾತ್ಮಕ ಶಿಲ್ಕು ಮುಂಗಡದ ಮೂಲ ಮೊತ್ತಕ್ಕಿಂತ ಹೆಚ್ಚಿನ ಮರುಪಾವತಿಯನ್ನು ಸೂಚಿಸುತ್ತದೆ. **ಕೋಷ್ಟಕ 4.9** ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕನ್ನು ಸೂಚಿಸುತ್ತದೆ. ಸಾರ್ವಜನಿಕ ಋಣ ಲೆಕ್ಕ ಶೀರ್ಷಿಕೆ (6003–00–108–0–01 – ರಾಜ್ಯದ ಆಂತರಿಕ ಸಾಲ– ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತದಿಂದ ಸರ್ಕಾರದ ಸಾಲ) ಅಡಿಯಲ್ಲಿನ ಶಿಲ್ಕು 2019–20ನೇ ವರ್ಷಕ್ಕೆ ಹೋಲಿಸಿದರೆ 2020–21ನೇ ಸಾಲಿನಲ್ಲಿ, ಈ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿನ ವ್ಯತಿರಿಕ್ತ ಶಿಲ್ಕನ್ನು ಚುಕ್ತಗೊಳಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳಿಂದ ₹40.83 ಕೋಟಿಗಳಷ್ಟು ಕಡಿಮೆಯಾಗಿದೆ ಆದಾಗ್ಯೂ, ಲೆಕ್ಕ ಶೀರ್ಷಿಕೆ 7610 – ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ 2019–20ನೇ ವರ್ಷಕ್ಕೆ ಹೋಲಿಸಿದರೆ, 2020–21ರಲ್ಲಿ ಶಿಲ್ಕು ₹2.14 ಕೋಟಿಗಳಷ್ಟು ಹೆಚ್ಚಳವಾಗಿದೆ. ಆದ್ದರಿಂದ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಿಸಿದಂತೆ ವ್ಯತಿರಿಕ್ತ ಶಿಲ್ಕಗಳನ್ನು ತೆರವುಗೊಳಿಸಲು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

**ಕೋಷ್ಟಕ 4.9: ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ವಿವರ | ಮೊತ್ತ | ಕಾರಣ |
|---|---|---|---|---|
| ಸಾರ್ವಜನಿಕ ಋಣ | | | | |
| 1 | 6003–00–108–0–01 | ರಾಜ್ಯ ಸರ್ಕಾರದ ಆಂತರಿಕ ಋಣ – ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತದಿಂದ ಸಾಲ | (ಖರ್ಚು) 133.57 | ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತದಿಂದ ಪಡೆದ ಸಾಲವನ್ನು ಲೆಕ್ಕಗಳಲ್ಲಿ ತೆಗೆದುಕೊಳ್ಳದಿರುವುದರಿಂದ, ಆದರೆ ಮರುಪಾವತಿಯನ್ನು ಸರ್ಕಾರಿ ಲೆಕ್ಕದ ಮೂಲಕ ಮಾಡಿರುವುದರಿಂದ. |
| 2 | 6004–03 & 6004–04 | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು | (ಖರ್ಚು) 10.36 | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು |
| ಒಟ್ಟು | | | (ಖರ್ಚು) . 143.93 | |
| ಸಾಲಗಳು ಮತ್ತು ಮುಂಗಡಗಳು | | | | |
| 3 | 6202,6215, 6217, 6401, 6402, 6405, 6408, 6435 6505, 6506, 6701, 7475 & 7615 | ರಾಜ್ಯ ಸಂಸ್ಥೆಗಳಿಗೆ ನೀಡಿದ ಸಾಲಗಳು | (ಜಮೆ) 90.06 | ತಪ್ಪು ವರ್ಗೀಕರಣದಿಂದ ವ್ಯತಿರಿಕ್ತ ಶಿಲ್ಕು ಉಂಟಾಗಿದ್ದು ಲೆಕ್ಕ ಹೊಂದಾಣಿಕೆ ಮಾಡಲಾಗುತ್ತಿದೆ. |
| 4 | 7610 | ಸರ್ಕಾರಿ ನೌಕರರಿಗೆ ಸಾಲ ಮತ್ತು ಮುಂಗಡಗಳು | (ಜಮೆ) 8.38 | ತಪ್ಪು ವರ್ಗೀಕರಣದಿಂದ ವ್ಯತಿರಿಕ್ತ ಶಿಲ್ಕು ಉಂಟಾಗಿದ್ದು ಲೆಕ್ಕ ಹೊಂದಾಣಿಕೆ ಮಾಡಲಾಗುತ್ತಿದೆ. |
| **ಒಟ್ಟು** | | | **ಜಮೆ 98.44** | |


*ಆಕರ – ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ*

## 4.6 ಇಲಾಖೆಗಳ ಅಂಕಿಗಳ ಹೊಂದಾಣಿಕೆ ಆಗದಿರುವುದು

ಆದಾಯ/ವೆಚ್ಚಗಳ ಮೇಲೆ ಪರಿಣಾಮ ಬೀರುವ ಆಯವ್ಯಯ ನಿಯಂತ್ರಣವನ್ನು ನಿರ್ವಹಿಸಲು ಮತ್ತು ಲೆಕ್ಕಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ನಿಯಂತ್ರಣ ಅಧಿಕಾರಿಗಳು ಪ್ರತಿ ತಿಂಗಳು ತಮ್ಮ ಪುಸ್ತಕಗಳಲ್ಲಿ ದಾಖಲಾದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಪ್ರಧಾನ ಮಹಾಲೇಖಾಪಾಲರ (ಲೆ ಮತ್ತು ಹ) ಲೆಕ್ಕ ಪುಸ್ತಕಗಳಲ್ಲಿ ಲೆಕ್ಕ ಹಾಕಿದ ಅಂಕಿಗಳೊಂದಿಗೆ ಸಮನ್ವಯಗೊಳಿಸಬೇಕಾಗುತ್ತದೆ. 2018–19 ರಿಂದ 2020–21ರ ಸ್ವೀಕೃತಿಗಳು ಮತ್ತು ವೆಚ್ಚದ ಸಮನ್ವಯದ ಕಳೆದ ಮೂರು ವರ್ಷಗಳ ವಿವರಗಳನ್ನು **ನಕ್ಷೆ–4.3**ರಲ್ಲಿ ಸೂಚಿಸಲಾಗಿದೆ.

**ನಕ್ಷೆ–4.3 : ಕಳೆದ ಮೂರು ವರ್ಷಗಳ – 2018–19 ರಿಂದ 2020–21ಲೆಕ್ಕ ಹೊಂದಾಣಿಕೆಯ ಸ್ಥಿತಿ.**

**(₹ ಕೋಟಿಗಳಲ್ಲಿ)**




*ಆಕರ – ಹಣಕಾಸು ಲೆಕ್ಕಗಳು*

** ಸಾಲಗಳು ಮತ್ತು ಮುಂಗಡಗಳನ್ನು ಹೊರತುಪಡಿಸಿ*

ನಿಯಂತ್ರಣ ಅಧಿಕಾರಿಗಳ ಸಂಖ್ಯೆ ಮತ್ತು ಕಳೆದ ಮೂರು ವರ್ಷಗಳಲ್ಲಿ ಲೆಕ್ಕ ಸಮನ್ವಯದ ಪ್ರಮಾಣಕ್ಕೆ ಸಂಬಂಧಿಸಿದ ವಿವರಗಳನ್ನು **ಕೋಷ್ಟಕ–4.10**ರಲ್ಲಿ ನೀಡಲಾಗಿದೆ.

**ಕೋಷ್ಟಕ 4.10: ಸ್ವೀಕೃತಿಗಳು ಮತ್ತು ವೆಚ್ಚದ ಅಂಕಿಗಳ ಸಮನ್ವಯದ ಸ್ಥಿತಿ**

**(₹ ಕೋಟಿಗಳಲ್ಲಿ)**

| ವರ್ಷ | ನಿಯಂತ್ರಣ ಅಧಿಕಾರಿಗಳ ಸಂಖ್ಯೆ | ಪೂರ್ಣವಾಗಿ ಲೆಕ್ಕ ಹೊಂದಾಣಿಕೆ ಮಾಡಿರುವುದು | ಭಾಗಶಃ ಲೆಕ್ಕ ಹೊಂದಾಣಿಕೆ ಮಾಡಿರುವುದು | ಲೆಕ್ಕ ಹೊಂದಾಣಿಕೆ ಮಾಡದೇ ಇರುವುದು | ವಹಿವಾಡು ನಡೆಸದ ನಿಯಂತ್ರಣ ಅಧಿಕಾರಿಗಳು | ಒಟ್ಟು ಮೊತ್ತ | ಲೆಕ್ಕ ಹೊಂದಾಣಿಕೆಯಾದ ಮೊತ್ತ | ಶತಾಂಶ |
|---|---|---|---|---|---|---|---|---|
| ಸ್ವೀಕೃತಿಗಳು | | | | | | | | |
| **2018–19** | 92 | 84 | 04 | 04 | – | 1,64,973.15 | 1,64,817.41 | 99.90 |
| **2019–20** | 101 | 75 | 18 | 08 | – | 1,75,487.87 | 1,73,687.60 | 98.97 |
| **2020–21** | 101 | 86 | – | 15 | – | 1,56,761.64 | 1,56,597.91 | 99.90 |
| ವೆಚ್ಚಗಳು | | | | | | | | |
| **2018–19** | 331 | 299 | 05 | 26 | 01 | 1,98,959.17 | 1,97,933.22 | 99.48 |
| **2019–20** | 322 | 245 | 50 | 27 | – | 2,09,786.84 | 1,79,098.38 | 85.37 |
| **2020–21** | 322 | 289 | – | 33 | – | 2,21,459.96 | 2,18,803.97 | 98.80 |

*ಆಕರ–ಎಮ್‌ಸಿಎ ಮೇಲಿನ ವರದಿ ಮತ್ತು ಹಣಕಾಸು ಲೆಕ್ಕಗಳು*

**ಕೋಷ್ಟಕ 4.10**ರಲ್ಲಿ ಸೂಚಿಸಿದಂತೆ ವೆಚ್ಚದ ಸಮನ್ವಯವು 2018–19ಕ್ಕೆ ಹೋಲಿಸಿದರೆ (ಶೇಕಡ 99) 2019–20ರಲ್ಲಿ (ಶೇಕಡ 85) ಕಡಿಮೆಯಾಗಿದೆ, ಇದು 2020–21ರಲ್ಲಿ (ಶೇಕಡ 98) ಹೆಚ್ಚಾಗಿದೆ. ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವಿತರಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಲೆಕ್ಕ ಸಮನ್ವಯವನ್ನು ಕೈಗೊಳ್ಳಲಾಗಿಲ್ಲ. ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಸಮನ್ವಯಕ್ಕಾಗಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಲೆಕ್ಕ ಹೊಂದಾಣಿಕೆಯನ್ನು ಪೂರ್ಣಗೊಳಿಸಲು ಇಲಾಖೆಗಳಿಗೆ ವಿನಂತಿಸಲಾಗಿದೆ ಎಂದು ಹೇಳಿದೆ.

### 4.7 ನಗದು ಶಿಲ್ಕಿನ ಲೆಕ್ಕಹೊಂದಾಣಿಕೆ

ಮಹಾಲೇಖಾಪಾಲರು (ಲೆ ಮತ್ತು ಹ) ಲೆಕ್ಕ ಪುಸ್ತಕಗಳ ಪ್ರಕಾರ ರಾಜ್ಯದ ನಗದು ಶಿಲ್ಕು ಮತ್ತು ರಿಸರ್ವ್ ಬ್ಯಾಂಕು ವರದಿ ಮಾಡಿದಂತೆ ನಗದು ಶಿಲ್ಕುಗಳ ನಡುವೆ ಯಾವುದೇ ವ್ಯತ್ಯಾಸ ಇರಬಾರದು.

ಮಾರ್ಚ್ 2021 ರಲ್ಲಿದ್ದಂತೆ, ಲೆಕ್ಕಗಳಲ್ಲಿ ಬಿಂಬಿತವಾಗಿರುವ ಅಂಕಿಗಳು {₹1,588.33 ಕೋಟಿ (ಖರ್ಚು)} ಮತ್ತು ರಿಸರ್ವ್ ಬ್ಯಾಂಕು ವರದಿ ಮಾಡಿದ ಅಂಕಿಗಳ {₹1,511.17 ಕೋಟಿ (ಖರ್ಚು)} ನಡುವೆ ವ್ಯತ್ಯಾಸವಿತ್ತು. {(₹72.16 ಕೋಟಿ (ಖರ್ಚು)}. ಏಜೆನ್ಸಿ ಬ್ಯಾಂಕ್‌ಗಳಿಂದ ಅಂಕಿಗಳ ವರದಿ ಮಾಡದಿರುವುದು ಮತ್ತು ಲೆಕ್ಕ ಹೊಂದಾಣಿಕೆ ಮಾಡದಿರುವುದು ವ್ಯತ್ಯಾಸಕ್ಕೆ ಕಾರಣವಾಗಿದ್ದು ಇದು ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿಯಲ್ಲಿ ಸಮನ್ವಯದಲ್ಲಿದೆ.

## ಡಿ. ಲೆಕ್ಕಗಳಲ್ಲಿ ವಿಷಯಗಳ ಕಾಣಿಸುವಿಕೆಗೆ ಸಂಬಂಧಿಸಿದ ಅವಲೋಕನ

### 4.8 ಲೆಕ್ಕಪತ್ರ ಮಾನದಂಡಗಳ ಅನುಸರಣೆ

ಭಾರತ ಸರ್ಕಾರದ ಬೆಂಬಲದೊಂದಿಗೆ ಭಾರತದ ಲೆಕ್ಕ ನಿಯಂತ್ರಕರು ಮತು ಮಹಾ ಲೆಕ್ಕ ಪರಿಶೋಧಕರ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಸರ್ಕಾರಿ ಲೆಕ್ಕಪತ್ರ ಮಾನದಂಡಗಳ ಸಲಹಾ ಮಂಡಳಿಗೆ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ಲೆಕ್ಕಪತ್ರ ಮತ್ತು ಹಣಕಾಸು ವರದಿ ಮಾನದಂಡಗಳನ್ನು ರೂಪಿಸುವ ಮತ್ತು ಪ್ರಸ್ತಾಪಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅವರ ಸಲಹೆಯ ಮೇರೆಗೆ, ಭಾರತದ ರಾಷ್ಟ್ರಪತಿಗಳು ಇಲ್ಲಿಯವರೆಗೆ ಮೂರು ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳನ್ನು (ಐಜಿಎಎಸ್) ಸೂಚಿಸಿದ್ದಾರೆ.

ಐಜಿಎಎಸ್ ನ ವಿವರಗಳು ಮತ್ತು 2020-21 ವರ್ಷಕ್ಕೆ ಕರ್ನಾಟಕ ಸರ್ಕಾರದ ಅವುಗಳ ಅನುಸರಣೆಯನ್ನು **ಕೋಷ್ಟಕ 4.11**ರಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ 4.11: ಲೆಕ್ಕಪತ್ರ ನಿರ್ವಹಣಾ ಮಾನದಂಡಗಳ ಅನುಸರಣೆ**

| ಕ್ರಮ ಸಂಖ್ಯೆ | ಲೆಕ್ಕಪತ್ರ ಮಾನದಂಡ | ಐಜಿಎಎಸ್‌ನ ಸಾರ | ಪ್ರಸ್ತುತ ಸ್ಥಿತಿ | ಕೊರತೆಯ ಪ್ರಭಾವ |
|---|---|---|---|---|
| 1 | ಐಜಿಎಎಸ್ – 1 ಸರ್ಕಾರ ನೀಡಿದ ಖಾತರಿಗಳು – ಅಗತ್ಯವಿರುವ ಕಾಣಿಸುವಿಕೆಗಳು | ಆಯಾ ವರ್ಷದಲ್ಲಿ ಸರ್ಕಾರವು ನೀಡಿದ ಗರಿಷ್ಠ ಖಾತರಿ, ಸೇರಿಕೆ, ತೆಗೆದು ಹಾಕಿದ್ದು (ಆ ವರ್ಷದ ಕೋರಿಕೆಗಳನ್ನು ಹೊರತುಪಡಿಸಿ) ವರ್ಷದ ಆರಂಭ ಮತ್ತು ಅಂತ್ಯದಲ್ಲಿನ ಶಿಲ್ಕು ಮತ್ತು ಖಾತರಿ ಶುಲ್ಕ ಇವುಗಳನ್ನು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಕಾಣಿಸುವ ಮಾನದಂಡವನ್ನು ನಿಗದಿಗೊಳಿಸಿದೆ | ಅನುಸರಿಸಲಾಗಿದೆ | ಖಾತರಿಗಳ ಕಾಣಿಸುವಿಕೆಯ ಮಾನದಂಡಗಳನ್ನು ಅನುಸರಿಸಲಾಗಿದೆ |
| 2 | ಐಜಿಎಎಸ್ – 2 ಸಹಾಯಾನುದಾನಗಳ ಲೆಕ್ಕ ಹಾಕುವಿಕೆ ಮತ್ತು ವರ್ಗೀಕರಣ | ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ನಿರ್ದಿಷ್ಟವಾಗಿ ಅನುಮೋದಿಸಿದ ಪ್ರಕರಣಗಳ ಹೊರತಾಗಿ ಅನುದಾನವು ಆಸ್ತಿಗಳ ನಿರ್ಮಾಣವನ್ನು ಒಳಗೊಂಡಿದ್ದರೂ ಅನುದಾನ ನೀಡುವವರ ಲೆಕ್ಕದಲ್ಲಿ ಅದನ್ನು ರಾಜಸ್ವ ವೆಚ್ಚವೆಂದು, ಅನುದಾನಿತರ ಲೆಕ್ಕದಲ್ಲಿ ರಾಜಸ್ವ ಸ್ವೀಕೃತಿಗಳೆಂದು ಪರಿಗಣಿಸಬೇಕು | ಅನುಸರಿಸಲಾಗಿಲ್ಲ | ಸಂಸ್ಥೆಗಳಿಗೆ ನೀಡಿದ ₹100 ಕೋಟಿಗಳನ್ನು ರಾಜಸ್ವ ವೆಚ್ಚಕ್ಕೆ ಬದಲಾಗಿ ಬಂಡವಾಳ ವೆಚ್ಚದಡಿ ವರ್ಗೀಕರಣ ಮಾಡಲಾಗಿತ್ತು.<br>ಇದು ನಿಗದಿಯ ಅನುಸರಣೆ ಆಗದಿರುವುದರಲ್ಲಿ ಫಲಿತವಾಗಿ ರಾಜಸ್ವ ಹೆಚ್ಚಳವನ್ನು ಮತ್ತು ಬಂಡವಾಳ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗಿದೆ. |
| 3 | ಐಜಿಎಎಸ್ – 3 ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು | ಈ ಮಾನದಂಡವು ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳ ಗುರುತಿಸುವಿಕೆ, ಪ್ರಮಾಣ, ಮೌಲ್ಯನಿರ್ಣಯ, ವರದಿಗಳು ಮತ್ತು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಪೂರ್ಣತೆ, ನಿಖರತೆ ಮತ್ತು ಏಕರೀತಿಯ ಲೆಕ್ಕರೂಢಿಯ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದೆ. | ಭಾಗಶಃ ಅನುಪಾಲನೆಯಾಗಿದೆ. | ರಾಜ್ಯ ಸರ್ಕಾರವು ಮಾನದಂಡದಲ್ಲಿ ನಿಗದಿಪಡಿಸಿದ ನಮೂನೆಯನ್ನು ಅಳವಡಿಸಿಕೊಂಡಿದೆ. ಆದರೆ ಸಾಲ ಮತ್ತು ಮುಂಗಡಗಳಿಗೆ ಸಂಬಂಧಿಸಿದಂತೆ ಅಸಲು ಮತ್ತು ಬಡ್ಡಿಗಳ ಎಲ್ಲ ವಿವರಗಳನ್ನು ಪ್ರಧಾನ ಮಹಾಲೇಖಾಪಾಲರು(ಲೆ ಮತ್ತು ಹ) ಅವರಿಗೆ ಸಲ್ಲಿಸುತ್ತಿಲ್ಲವಾದ್ದರಿಂದ ಅನುಸರಣೆಯು ಅಪೂರ್ಣವಾಗಿದೆ. |

ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಐಜಿಎಎಸ್ 2 – ಸಹಾಯಾನುದಾನಕ್ಕೆ ಸಂಬಂಧಿಸಿದಂತೆ, ತಪ್ಪು ವರ್ಗೀಕರಣವನ್ನು ತಪ್ಪಿಸಲಾಗುವುದು ಮತ್ತು ಐಜಿಎಎಸ್ 3 – ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಿಸಿದಂತೆ, ಬಾಕಿ ಇರುವ ಸಾಲಗಳು ಮತ್ತು ಮುಂಗಡಗಳ ವಿವರಗಳನ್ನು ನೀಡಲು ಇಲಾಖೆಗಳಿಗೆ ವಿನಂತಿಸಲಾಗುವುದು ಎಂದು ಹೇಳಿದೆ.

## 4.9 ಸ್ವಾಯತ್ತಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದಲ್ಲಿ ಇಡುವುದು

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ನಗರಾಭಿವೃದ್ಧಿ, ಇತ್ಯಾದಿ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರವು ಹಲವಾರು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ರಾಜ್ಯದ 13 ಸ್ವಾಯತ್ತ ಸಂಸ್ಥೆಗಳ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಡಿಪಿಸಿ) ಕಾಯಿದೆ, 1971ರ ಪರಿಚ್ಛೇದ 19 ಮತ್ತು 20ರ ಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ.

ಲೆಕ್ಕಪರಿಶೋಧನೆಯ ವಹಿಕೆ, ಲೆಕ್ಕಗಳ ಸಲ್ಲಿಕೆ, ಪ್ರತ್ಯೇಕ ಪರಿಶೋಧನಾ ವರದಿಗಳನ್ನು ನೀಡುವುದು ಮತ್ತು ರಾಜ್ಯ ಶಾಸಕಾಂಗದ ಮುಂದೆ ಅವುಗಳ ಮಂಡಿಕೆಗಳ ಸ್ಥಿತಿಯನ್ನು **ಅನುಬಂಧ 4.3**ರಲ್ಲಿ ಸೂಚಿಸಲಾಗಿದೆ.

ಅನುಬಂಧದಲ್ಲಿ ಕಾಣಿಸಿದಂತೆ ಐದು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಪರಿಶೋಧನಾ ವರದಿ ಮತ್ತು ಒಂದು ಸ್ವಾಯತ್ತ ಸಂಸ್ಥೆಗೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಪರಿಶೋಧನಾ ವರದಿಗಳು ಶಾಸಕಾಂಗದಲ್ಲಿ ಮಂಡಿಸಲು ಬಾಕಿ ಇವೆ. ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು 2017–18ನೇ ಸಾಲಿಗೆ ಮೊದಲ ಬಾರಿಗೆ ಲೆಕ್ಕಗಳನ್ನು ಸಲ್ಲಿಸಬೇಕಿದೆ.

## 4.10 ಇಲಾಖಾ ವಾಣಿಜ್ಯೋದ್ಯಮಗಳು/ನಿಗಮಗಳು/ಕಂಪನಿಗಳು

ವಾಣಿಜ್ಯ ಮತ್ತು ಅರೆ–ವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಿರ್ವಹಿಸುವ ಕೆಲವು ಸರ್ಕಾರಿ ಇಲಾಖಾ ಸಂಸ್ಥೆಗಳು ವಾರ್ಷಿಕವಾಗಿ ನಿಗದಿತ ಸ್ವರೂಪದಲ್ಲಿ ಹಣಕಾಸಿನ ಕಾರ್ಯಾಚರಣೆಗಳ ಫಲಿತಾಂಶವನ್ನು ತೋರಿಸುವ ಪ್ರಪತ್ರ ಲೆಕ್ಕಗಳನ್ನು ಸಿದ್ಧಪಡಿಸುವ ಅಗತ್ಯವಿದ್ದು, ಇದರಿಂದ ಸರ್ಕಾರವು ಈ ಸಂಸ್ಥೆಗಳ ಕಾರ್ಯ ಫಲವನ್ನು ಕೆಲಸವನ್ನು ನಿರ್ಣಯಿಸಬಹುದು. ವಾಣಿಜ್ಯ ಮತ್ತು ಅರೆ ವಾಣಿಜ್ಯ ಉದ್ಯಮಗಳ ಅಂತಿಮಗೊಳಿಸಿದ ಲೆಕ್ಕಗಳು ಅವುಗಳ ಒಟ್ಟಾರೆ ಆರ್ಥಿಕ ಸ್ವಾಸ್ಥ್ಯ ಮತ್ತು ದಕ್ಷತೆಯನ್ನು ಪ್ರತಿಬಿಂಬಿಸುತ್ತವೆ. ಲೆಕ್ಕಗಳ ಸಕಾಲಿಕ ಅಂತಿಮಗೊಳಿಸುವಿಕೆಯ ಅನುಪಸ್ಥಿತಿಯಲ್ಲಿ, ಸರ್ಕಾರದ ಹೂಡಿಕೆಯು ಲೆಕ್ಕ ಪರಿಶೋಧನೆ/ರಾಜ್ಯ ಶಾಸಕಾಂಗದ ಪರಿಶೀಲನೆಯಿಂದ ಹೊರಗೆ ಉಳಿಯುತ್ತದೆ. ತತ್ಪರಿಣಾಮವಾಗಿ, ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ದಕ್ಷತೆಯನ್ನು ಸುಧಾರಿಸಲು ಅಗತ್ಯವಿರುವ ಸರಿಪಡಿಕೆಯ ಕ್ರಮಗಳನ್ನು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳಲಾಗುವುದಿಲ್ಲ. ಇದಲ್ಲದೆ, ವಿಳಂಬವು ವ್ಯವಸ್ಥೆಯನ್ನು ವಂಚನೆ ಮತ್ತು ಸಾರ್ವಜನಿಕ ಹಣದ ಸೋರಿಕೆಯ ಅಪಾಯಕ್ಕೆ ಈಡುಗೊಳಿಸುವ ಸಂಭವವಿದೆ.

ಸರ್ಕಾರದಲ್ಲಿನ ಇಲಾಖೆಗಳ ಮುಖ್ಯಸ್ಥರು ಈ ಉದ್ಯಮಗಳು ನಿಗದಿತ ಸಮಯದ ಚೌಕಟ್ಟಿನೊಳಗೆ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಲೆಕ್ಕಪರಿಶೋಧನೆಗಾಗಿ ಪ್ರಧಾನ ಮಹಾಲೇಖಾಪಾಲರಿಗೆ ಸಲ್ಲಿಸುತ್ತವೆ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಮುಚ್ಚಿದ/ವರ್ಗಾಯಿಸಲ್ಪಟ್ಟ/ಸಹಕಾರಿ ಒಕ್ಕೂಟಗಳಾಗಿ ಪರಿವರ್ತಿಸಲಾದ ಒಂಬತ್ತು ಉದ್ಯಮಗಳಲ್ಲಿ, ಎರಡು ಉದ್ಯಮಗಳಿಗೆ ಸಂಬಂಧಿಸಿದಂತೆ ಪ್ರಪತ್ರ ಲೆಕ್ಕಗಳು 1969–70 ರಿಂದ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಉದ್ಯಮಗಳ ಪ್ರಪತ್ರ ಲೆಕ್ಕಗಳ ತಯಾರಿಕೆಯಲ್ಲಿ ಬಾಕಿಯಿರುವ ಸ್ಥಿತಿಯನ್ನು **ಅನುಬಂಧ 4.4**ರಲ್ಲಿ ನೀಡಲಾಗಿದೆ.

ಅನುಬಂಧದಲ್ಲಿ ತೋರಿಸಿದಂತೆ 2008–09 ರವರೆಗೆ ಲೆಕ್ಕಗಳನ್ನು ಅಂತಿಮಗೊಳಿಸಿರುವ ಒಂದು ಉದ್ದಿಮೆ, 2015–16ರವರೆಗಿನ ನಾಲ್ಕು ಉದ್ದಿಮೆಗಳು 2016–17ರವರೆಗಿನ ಒಂದು ಉದ್ದಿಮೆ, ಒಟ್ಟು ಆರು ಉದ್ದಿಮೆಗಳಲ್ಲಿ ₹8.87 ಕೋಟಿಗಳ ಹೂಡಿಕೆ ಮಾಡಲಾಗಿದೆ.

ಮಾರ್ಚ್ 2019ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಹಣಕಾಸು ವರದಿಯ **ಕಂಡಿಕೆ 3.4**ರಲ್ಲಿನ ಲೆಕ್ಕ ಪರಿಶೋಧನೆಯ ಅವಲೋಕನಕ್ಕೆ ಉತ್ತರವಾಗಿ, ಆರ್ಥಿಕ ಇಲಾಖೆಯು ಲೆಕ್ಕಪರಿಶೋಧನಾ ಕಚೇರಿಗೆ ಪ್ರಪತ್ರ ಲೆಕ್ಕಗಳನ್ನು ಒದಗಿಸುವಂತೆ ವಿನಂತಿಸಲಾಗಿದೆ ಎಂದು ಹೇಳಿದೆ (ಮಾರ್ಚ್ 2019).

## 4.11 ಸಂಸ್ಥೆಗಳು ಮತ್ತು ಪ್ರಾಧಿಕಾರಗಳಿಗೆ ನೀಡಿದ ಅನುದಾನ/ಸಾಲಗಳ ವಿವರಗಳನ್ನು ಸಲ್ಲಿಸದಿರುವುದು

ಭಾರತದ ಲೆಕ್ಕ ನಿಯಂತ್ರಕರು ಮತು ಮಹಾ ಲೆಕ್ಕ ಪರಿಶೋಧಕರ (ಡಿಪಿಸಿ) ಕಾಯಿದೆ, 1971ರ ಪರಿಚ್ಛೇದ 14 ಅಡಿಯಲ್ಲಿ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ ರಾಜ್ಯದ ಸಂಚಿತ ನಿಧಿಯಿಂದ ಅನುದಾನ ಅಥವಾ ಸಾಲಗಳಿಂದ ಗಣನೀಯವಾಗಿ ಹಣಕಾಸು ಒದಗಿಸಿದಾಗ, ಆ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ, ಆ ಸಮಯಕ್ಕೆ ಅನ್ವಯವಾಗುವ ಯಾವುದೇ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟು ಸಿಎಜಿಯು ಆ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಪರಿಶೋಧನೆ ಮಾಡಿ ಪರಿಶೋಧಿತ ಸ್ವೀಕೃತಿಗಳು ಮತ್ತು ವೆಚ್ಚಗಳ ವರದಿಯನ್ನು ಸಲ್ಲಿಸುತ್ತಾರೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ (ಡಿಪಿಸಿ) ಕಾಯಿದೆ, 1971ರ ಪರಿಚ್ಛೇದ 15ರ ಅಡಿಯಲ್ಲಿ, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ಅನುದಾನ ಅಥವಾ ಸಾಲವನ್ನು ನೀಡಿದರೆ, ಅದಕ್ಕೆ ಸಂಬಂಧಿಸಿದ ಷರತ್ತುಗಳ

ಪಾಲನೆಗೆ ಅನುಸರಿಸ ಬೇಕಾದ ಕಾರ್ಯವಿಧಾನಗಳನ್ನು ಮಂಜೂರಾತಿ ಪ್ರಾಧಿಕಾರವು ತೃಪ್ತಿಕರವಾಗಿ ನಿರ್ವಹಿಸಿದೆಯೇ ಎಂಬುದನ್ನು ಸಿಎಜಿಯು ಪರಿಶೀಲಿಸುತ್ತಾರೆ.

ಮೇಲಿನ ವಿಧಿಗಳ ಅಡಿಯಲ್ಲಿ ಲೆಕ್ಕ ಪರಿಶೋಧನೆಗೆ ಒಳಪಡುವ ಸಂಸ್ಥೆಗಳು/ಸಂಸ್ಥೆಗಳು/ಪ್ರಾಧಿಕಾರಗಳನ್ನು ಗುರುತಿಸುವ ಅಗತ್ಯವಿದೆ ಮತ್ತು ಸರ್ಕಾರಿ ಇಲಾಖೆಗಳ ಮುಖ್ಯಸ್ಥರು ಪ್ರತಿವರ್ಷ ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಹಣಕಾಸಿನ ನೆರವು ನೀಡಿದ ಸಂಸ್ಥೆಗಳ ಮತ್ತು ಯಾವ ಉದ್ದೇಶಕ್ಕಾಗಿ ಸಹಾಯವನ್ನು ನೀಡಲಾಗಿದೆ ಮತ್ತು ಸಂಸ್ಥೆಗಳ ಒಟ್ಟು ವೆಚ್ಚದ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಬೇಕಾಗಿರುತ್ತದೆ.

**ಅನುಬಂಧ 4.5**ರಲ್ಲಿ ವಿವರಿಸಿದಂತೆ ಇಪ್ಪತ್ತೆರಡು ಇಲಾಖೆಗಳು ಎರಡು ವರ್ಷದಿಂದ 20 ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಅನುದಾನವನ್ನು ಸ್ವೀಕರಿಸುವ 1,082 ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಿಲ್ಲ. ಅನುಬಂಧದಲ್ಲಿ ನೋಡಿದಂತೆ, ಪ್ರಮುಖವಾಗಿ ಶಿಕ್ಷಣ ಇಲಾಖೆಯು ಮಾಹಿತಿಯನ್ನು ನೀಡಿಲ್ಲ.

ಆದರೂ, ಮಾರ್ಚ್ 2019ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ **ವರದಿಯ ಕಂಡಿಕೆ 3.2**ರಲ್ಲಿನ ಲೆಕ್ಕ ಪರಿಶೋಧನೆಯ ಅವಲೋಕನಕ್ಕೆ ಉತ್ತರವಾಗಿ, ಆರ್ಥಿಕ ಇಲಾಖೆಯು (ಆಗಸ್ಟ್ 2021) ಲೆಕ್ಕ ಪರಿಶೋಧನಾ ಕಚೇರಿಗೆ ಮಾಹಿತಿಯನ್ನು ಒದಗಿಸಲು ಸಂಬಂಧಪಟ್ಟ ಇಲಾಖೆಗಳನ್ನು ಕೋರಲಾಗಿದೆ (ಫೆಬ್ರವರಿ 2021) ಎಂದು ಹೇಳಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾಹಿತಿ ನೀಡದ ಇಲಾಖೆಗಳ ಸಂಖ್ಯೆ ಹೆಚ್ಚಿರುವುದು ಕಂಡು ಬಂದಿದೆ.

ಆರ್ಥಿಕ ಇಲಾಖೆಯು ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಹಣಕಾಸಿನ ನೆರವು/ಅನುದಾನವನ್ನು ಪಡೆಯುವ ಸಂಸ್ಥೆಗಳ ವಿವರಗಳನ್ನು ಒದಗಿಸಲು ವಿನಂತಿಸಲಾಗುವುದು ಎಂದು ಪುನರುಚ್ಚರಿಸಿದೆ (ಡಿಸೆಂಬರ್ 2021).

### 4.12 ಲೆಕ್ಕ ಸಲ್ಲಿಕೆಯ ಕಾಲಮಿತಿಗಳು ಮತ್ತು ಲೆಕ್ಕಗಳ ಗುಣಮಟ್ಟ

ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಅವರು 34 ಖಜಾನೆಗಳು, 3 ಇತರೆ, 103 ಲೋಕೋಪಯೋಗಿ ವಿಭಾಗಗಳು ಮತ್ತು 103 ಅರಣ್ಯ ವಿಭಾಗಗಳು ಸಲ್ಲಿಸಿದ ಆರಂಭಿಕ ಲೆಕ್ಕಗಳಿಂದ ಮತ್ತು ರಿಸರ್ವ್ ಬ್ಯಾಂಕು ನೀಡುವ ಸೂಚನೆಗಳಿಂದ ರಾಜ್ಯ ಸರ್ಕಾರದ ಲೆಕ್ಕಗಳನ್ನು ಸಂಕಲಿಸುತ್ತಾರೆ. ಇಲಾಖೆಗಳ ಕೆಲವು ವಿಭಾಗಗಳಿಂದ ಮೊದಲ ಮೂರು ತ್ರೈಮಾಸಿಕಗಳಲ್ಲಿ ಮಾಸಿಕ ಲೆಕ್ಕಗಳನ್ನು ಸಲ್ಲಿಸುವಲ್ಲಿ ವಿಳಂಬವಾಗಿದ್ದರೂ, ರಾಜ್ಯ ಸರ್ಕಾರವು ಮೇಲ್ವಿಚಾರಣೆ ಮತ್ತು ನಿಗದಿತ ಸಮಯಕ್ಕೆ ಸರಿಯಾಗಿ ಲೆಕ್ಕಗಳನ್ನು ಸಲ್ಲಿಸುವುದನ್ನು ಖಾತ್ರಿಪಡಿಸಿದೆ. ಈ ಸಮಯೋಚಿತ ಲೆಕ್ಕಗಳ ಸಲ್ಲಿಕೆಯು 2020–21ರಲ್ಲಿಯೂ ಮುಂದುವರೆದಿದ್ದು ಪರಿಣಾಮವಾಗಿ, ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಅವರು ಸರ್ಕಾರಕ್ಕೆ ಸಲ್ಲಿಸುವ ಮಾಸಿಕ ಸಿವಿಲ್ ಲೆಕ್ಕಗಳಲ್ಲಿ ಯಾವುದೇ ಲೆಕ್ಕಗಳನ್ನು ಹೊರತುಪಡಿಸಿರಲಿಲ್ಲ.

### 4.13 ಹಣ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿ.

2020–21ರಅಂತ್ಯಕ್ಕೆ ₹26.40 ಕೋಟಿಗಳ ಮೊತ್ತದ ಸರ್ಕಾರಿ ಹಣದ ದುರುಪಯೋಗ, ನಷ್ಟ ಇತ್ಯಾದಿಗಳ 33 ಪ್ರಕರಣಗಳಿದ್ದು, ಅಂತಿಮ ಕ್ರಮ ಬಾಕಿ ಇದೆ. ಇಲಾಖಾವಾರು ಬಾಕಿ ಇರುವ ಪ್ರಕರಣಗಳ ವಿಭಜನೆಯನ್ನು **ಕೋಷ್ಟಕ 4.12**ರಲ್ಲಿ ಕೆಳಗೆ ನೀಡಲಾಗಿದೆ ಮತ್ತು **ಅನುಬಂಧ 4.6**ರಲ್ಲಿ ಕಾಲವಾರು ವಿಭಜನೆಯನ್ನು ಸೂಚಿಸಲಾಗಿದೆ.

**ಕೋಷ್ಟಕ 4.12: ದುರುಪಯೋಗ, ನಷ್ಟ ಮತ್ತು ಕಳ್ಳತನ ಇತ್ಯಾದಿಗಳ ಬಾಕಿ ಉಳಿದಿರುವ ಪ್ರಕರಣಗಳು**

**(₹ ಲಕ್ಷಗಳಲ್ಲಿ)**

| ಇಲಾಖೆಯ ಹೆಸರು | ಸರ್ಕಾರದ ಸವತ್ತುಗಳ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿ | | ಬಾಕಿ ಇರುವ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿಗಳ ಅಂತಿಮ ವಿಲೇವಾರಿಯಲ್ಲಿನ ವಿಳಂಬಕ್ಕೆ ಕಾರಣಗಳು | | | | | |
|---|---|---|---|---|---|---|---|---|
| | | | ಇಲಾಖಾ ಮತ್ತು ದಂಡಾರ್ಹ ಪರಿಶೋಧನೆಗಳು ನಿರೀಕ್ಷೆಯಲ್ಲಿರುವುದು | | ಇಲಾಖಾ ಕ್ರಮ ಪ್ರಾರಂಭವಾಗಿದ್ದು ಅಂತಿಮ ಗೊಳ್ಳದಿರುವುದು | | ದಂಡ ಪ್ರಕ್ರಿಯೆ ಅಂತಿಮವಾಗಿದ್ದು ಹಣ ವಸೂಲಿ ಬಾಕಿ ಇರುವುದು | |
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| ಲೋಕೋಪಯೋಗಿ | 02 | 1,180.18 | – | – | 02 | 1,180.18 | – | – |
| ಗೃಹ | 08 | 256.09 | 03 | 101.93 | 05 | 154.16 | – | – |
| ಆಹಾರ ಮತ್ತು ನಾಗರೀಕ ಸರಬರಾಜು | 01 | 525.00 | 01 | 525.00 | – | – | – | – |
| ಸಮಾಜ ಕಲ್ಯಾಣ | 01 | 9.48 | 01 | 9.48 | – | – | – | – |
| ವೈದ್ಯಕೀಯ ಶಿಕ್ಷಣ | 02 | 1.91 | 02 | 1.91 | – | – | – | – |
| ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು | 04 | 643.70 | 04 | 643.70 | – | – | – | – |
| ತಾಂತ್ರಿಕ ಶಿಕ್ಷಣ | 01 | 0.28 | 01 | 0.28 | – | – | – | – |
| ಅರಣ್ಯ | 02 | 0.74 | 02 | 0.74 | – | – | – | – |
| ಆರೋಗ್ಯ ಮತ್ತು ನಾಗರೀಕ ಪೂರೈಕೆ | 10 | 1.6 | 10 | 1.6 | – | – | – | – |
| ಕಾರ್ಮಿಕ | 01 | 0.89 | – | – | 01 | 0.89 | | |
| ನ್ಯಾಯಾಂಗ | 01 | 20.00 | 01 | 20.00 | | | | |
| **ಒಟ್ಟು** | **33** | **2,639.87** | **25** | **1,304.64** | **08** | **1,335.23** | – | – |

*ಆಕರ: ಮಹಾಲೇಖಾಪಾಲರು (ಲೆಕ್ಕಪರಿಶೋಧನೆ I) ಮತ್ತು ಮಹಾಲೇಖಾಪಾಲರು (ಲೆಕ್ಕಪರಿಶೋಧನೆ II) ಕಚೇರಿ*

## 4.14 ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಸರಣಾ ಕ್ರಮ

2009–10ನೇ ಸಾಲಿನ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಮೇ 2011ರಿಂದ ಆಗಸ್ಟ್ 2011ರ ಅವಧಿಯಲ್ಲಿ ಚರ್ಚಿಸಿದ್ದು ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಡಿಸೆಂಬರ್ 2011ರಲ್ಲಿ ಶಾಸಕಾಂಗದ ಮುಂದೆ ಇರಿಸಲಾಯಿತು. ಸಾರ್ವಜವಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳ ಅನುಸರಣೆ, ಕ್ರಮ ತೆಗೆದುಕೊಂಡ ಟಿಪ್ಪಣಿಯನ್ನು ಸೆಪ್ಟೆಂಬರ್ 2014ರಲ್ಲಿ ಅದರ ಪರಿಗಣನೆಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಇರಿಸಲಾಯಿತು. ಸಮಿತಿಯು ಸರ್ಕಾರವು ಒದಗಿಸಿದ ಕ್ರಮ ತೆಗೆದುಕೊಂಡ ಟಿಪ್ಪಣಿಯನ್ನು ಚರ್ಚಿಸಿ ಮತ್ತಷ್ಟು ಶಿಫಾರಸುಗಳನ್ನು ಮಾಡಿ ಜುಲೈ 2015ರಲ್ಲಿ ಶಾಸಕಾಂಗದ ಮುಂದೆ ಇರಿಸಿತು.

2012–13ರಿಂದ 2017–18ರವರೆಗಿನ ಹೆಚ್ಚುವರಿ ವೆಚ್ಚವನ್ನು ಸಕ್ರಮೀಕರಣಗೊಳಿಸುವುದು, ಧನವಿನಿಯೋಗ ಲೆಕ್ಕಗಳಲ್ಲಿನ ವ್ಯಾಖ್ಯಾನಗಳ ಆಯ್ಕೆಗೆ ವಿತ್ತೀಯ ಮಿತಿಗಳ ಪರಿಷ್ಕರಣೆಗಳಂತಹ, ರಾಜ್ಯ ಹಣಕಾಸುಗಳ ಕುರಿತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಗಮನಕ್ಕೆ ಅರ್ಹವಾದ ಪ್ರಮುಖ ವಿಷಯಗಳನ್ನು ಪರಿಗಣನೆಗಾಗಿ ಶಾಸಕಾಂಗದ ಗಮನಕ್ಕೆ ತರಲಾಗಿದೆ.

## 4.15 ತೀರ್ಮಾನ

ಕಳೆದ ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮುಕ್ತಾಯದ ಶಿಲ್ಕುಗಳು ಸ್ವಲ್ಪಮಟ್ಟಿನ ಇಳಿಕೆಯನ್ನು ತೋರಿಸಿವೆ. ಅಂತಿಮ ಶಿಲ್ಕುಗಳಲ್ಲಿ ಇಳಿಕೆ ಕಂಡು ಬಂದರೂ, ಸರ್ಕಾರಕ್ಕೆ ಮರು ಪಾವತಿ ಮಾಡಬೇಕಾಗಿದ್ದ ಬಳಕೆಯಾಗದ ಮೊತ್ತವನ್ನು ಇದು ಒಳಗೊಂಡಿದೆ. ಜತೆಗೆ ನಿಷ್ಕ್ರಿಯ ವೈಯಕ್ತಿಕ

ಠೇವಣಿ ಖಾತೆಗಳ ಸಂಖ್ಯೆಯೂ ಹೆಚ್ಚಿದೆ. ಅಂತಹ ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳನ್ನು ಸಮನ್ವಯಗೊಳಿಸದಿರುವುದು ಮತ್ತು ಅಂತಹ ಖಾತೆಗಳಲ್ಲಿ ಇರುವ ಬಳಕೆ ಮಾಡದ ಶಿಲ್ಕುಗಳನ್ನು ರಾಜ್ಯದ ಸಂಚಿತ ನಿಧಿಗೆ ವರ್ಗಾಯಿಸದಿರುವುದು ಸಾರ್ವಜನಿಕ ನಿಧಿಯ ದುರುಪಯೋಗ, ವಂಚನೆ ಮತ್ತು ದುರ್ಬಳಕೆಯ ಅಪಾಯದಿಂದ ಕೂಡಿದೆ.

ಅಮಾನತ್ತುಗಳ ಅಡಿಯಲ್ಲಿ ಶಿಲ್ಕುಗಳನ್ನು ತೆರವುಗೊಳಿಸದಿರುವುದು ಸರಿಯಾದ ಲೆಕ್ಕದ ಅಡಿಯಲ್ಲಿ ಸರ್ಕಾರದ ಸ್ವೀಕೃತಿ ಮತ್ತು ವೆಚ್ಚವನ್ನು ನಿಖರವಾಗಿ ಪ್ರತಿಬಿಂಬಿಸುವುದಿಲ್ಲ. ಇದಲ್ಲದೆ, ಕೆಲವು ಋಣ ಠೇವಣಿ ಇರಸಾಲುಗಳ ಶೀರ್ಷಿಕೆಯಡಿ ಪ್ರತಿಕೂಲ ಶಿಲ್ಕುಗಳಿದ್ದವು. ಇವುಗಳ ತೀರುವಳಿಗಾಗಿ ಪರಿಹಾರ ಕ್ರಮಗಳ ಅಗತ್ಯವಿತ್ತು.

ಪ್ರಸಕ್ತ ವರ್ಷದಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಶೇಕಡಾ 29ಕ್ಕಿಂತ ಹೆಚ್ಚು ಬಿಲ್ಲುಗಳು ಪಾವತಿಗಲ್ಲದ ಸವಿವರ ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಕೊರತೆಯಿಂದ ಬಾಕಿ ಉಳಿದಿವೆ.

ಸರ್ಕಾರದಿಂದ ಗಣನೀಯವಾಗಿ ಅನುದಾನ ಪಡೆದ ಸಂಸ್ಥೆಗಳ ಬಗ್ಗೆ ಲೆಕ್ಕಪರಿಶೋಧನೆ ಮಾಡಲು ಮಾಹಿತಿ ನೀಡುವಂತೆ ಪ್ರಧಾನ ಇಲಾಖೆಯು ಆಡಳಿತಾತ್ಮಕ ಇಲಾಖೆಗಳಿಗೆ ಸೂಚನೆಗಳನ್ನು ನೀಡಿದ್ದರೂ, ಅಗತ್ಯ ಮಾಹಿತಿಯನ್ನು ಒದಗಿಸದ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬಂದಿದೆ. ಇದು ಅಸಮರ್ಪಕ ಆಂತರಿಕ ನಿಯಂತ್ರಣ ಮತ್ತು ರಾಜ್ಯ ಸರ್ಕಾರದ ಮೇಲ್ವಿಚಾರಣಾ ಕಾರ್ಯ ವಿಧಾನದಲ್ಲಿನ ಕೊರತೆಯನ್ನು ಸೂಚಿಸುತ್ತದೆ.

### 4.16 ಶಿಫಾರಸುಗಳು

- ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳಲ್ಲಿ ಬಳಕೆಯ ಅವಧಿಯನ್ನು ಮೀರಿದ ಶಿಲ್ಕುಗಳ ತೀರುವಳಿಗೊಳಿಸುವುದನ್ನು ಪರಿಶೀಲಿಸುವ ಅಗತ್ಯವಿದೆ ಮತ್ತು ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಸ್ಥಿತಿಯನ್ನು ಪರಿಶೀಲಿಸಲು ಮತ್ತು ಶಿಲ್ಕುಗಳ ಹೊಂದಾಣಿಕೆಯ ನಂತರ ಮತ್ತು ನಿರ್ವಾಹಕರು ಮತ್ತು ಖಜಾನೆಯೊಂದಿಗೆ ಸಮಾಲೋಚಿಸಿದ ನಂತರ ನಿಷ್ಕ್ರಿಯ ಖಾತೆಗಳನ್ನು ಮುಕ್ತಾಯ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.
- ಹಿಂದಿನ ಹಣಕಾಸು ಆಯೋಗದ ಬಳಕೆಯಾಗದ ಮೊತ್ತಗಳು, ಯೋಜನೆಗಳು ಇತ್ಯಾದಿ, ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿದಿರುವ ಹಣವನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗಿದೆ.
- ಲೆಕ್ಕಪತ್ರ ವರ್ಷದಲ್ಲಿಯೇ ವಹಿವಾಟನ್ನು ಅಂತಿಮ ಲೆಕ್ಕಶೀರ್ಷಿಕೆಗೆ ತರಲು ಅಮಾನತ್ತು ಶೀರ್ಷಿಕೆಗಳ ಪರಿಶೀಲನೆಯನ್ನು ಮಾಡಬೇಕಾಗಿದೆ.
- ನಿಗದಿತ ಅವಧಿಯೊಳಗೆ ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಹೊಂದಾಣಿಕೆಯನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.
- ಸರ್ಕಾರದಿಂದ ಗಣನೀಯವಾಗಿ ಹಣಕಾಸು ಒದಗಿಸಿದ ಸಂಸ್ಥೆಗಳ ಬಗ್ಗೆ ಎಲ್ಲಾ ಆಡಳಿತ ಇಲಾಖೆಗಳು ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ) ಕಚೇರಿಗೆ ಮಾಹಿತಿಯನ್ನು ಒದಗಿಸುವುದನ್ನು ಸರ್ಕಾರವು ಖಚಿತ ಪಡಿಸಿಕೊಳ್ಳಬೇಕು.

**ಬೆಂಗಳೂರು** — **(ಶಾಂತಿ ಪ್ರಿಯ ಎಸ್)**

**ದಿನಾಂಕ** — **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–I)**

**ಕರ್ನಾಟಕ**

**ಮೇಲು ಸಹಿ ಮಾಡಿದೆ**

**ನವದೆಹಲಿ** — **(ಗಿರೀಶ್ ಚಂದ್ರ ಮುರ್ಮು)**

**ದಿನಾಂಕ** — **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**